# ECHO OF HIS CALL

# ಕರೆಯು ಪ್ರತಿಧ್ವನಿ

KANNADA

ECHO OF HIS CALL 1969-2019 GOLDEN JUBILEE (ECHO GROUP)

*India's National Spiritual Newspaper*

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXIV | YEAR OF OUR LORD JESUS CHRIST, JULY 2022 | No. 6

## ಪರಿಶುದ್ಧ ಸತ್ಯವೇದ

**ದಯಮಾಡಿ ಈ ವಾಕ್ಯ ಭಾಗಗಳನ್ನು ಕಂಠ ಪಾಠ ಮಾಡಿರಿ.** (ಜ್ಞಾನೋಕ್ತಿ 30:1-10)

1. ಯೆಹೋವನೇ, ನನ್ನ ಶತ್ರುಗಳು ಸಂತೋಷಿಸುವದಕ್ಕೆ ಅವಕಾಶ ಕೊಡದೆ ನನ್ನನ್ನು ಉದ್ಧರಿಸಿದ್ದರಿಂದ ನಿನ್ನನ್ನು ಕೊಂಡಾಡುವೆನು.
2. ಯೆಹೋವನೇ, ನನ್ನ ದೇವರೇ, ನಿನಗೆ ಮೊರೆಯಿಡಲು ನನ್ನನ್ನು ಸ್ವಸ್ಥ ಮಾಡಿದಿ.
3. ಯೆಹೋವನೇ, ನನ್ನ ಪ್ರಾಣವನ್ನು ಪಾತಾಳದಿಂದಲೂ ಎತ್ತಿದಿಯಲ್ಲಾ; ನನ್ನನ್ನು ಸಮಾಧಿಯಲ್ಲಿ ಸೇರಗೊಡದೆ ಬದುಕಿಸಿದಿಯಲ್ಲಾ.
4. ಯೆಹೋವನ ಭಕ್ತರೇ, ಆತನನ್ನು ಕೀರ್ತಿಸಿರಿ; ಆತನ ಪರಿಶುದ್ಧ ನಾಮವನ್ನು ಕೊಂಡಾಡಿರಿ.
5. ಆತನ ಕೋಪವು ಕ್ಷಣಮಾತ್ರವೇ; ಆತನ ಅನುಗ್ರಹವೋ ಜೀವಮಾನವೆಲ್ಲಾ ಇರುವುದು; ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವದು.
6. ನಾನಂತೂ ಸುಖದಿಂದಿದ್ದಾಗ - ನನಗೆ ಎಂದಿಗೂ ಚಲನವೇ ಇಲ್ಲವೆಂದು ಹೇಳಿಕೊಂಡಿದ್ದೆನು.
7. ಯೆಹೋವನೇ, ಕೃಪೆಮಾಡಿ ನಾನಿರುವ ಬೆಟ್ಟಕ್ಕೆ ಸ್ಥಿರವಾದ ಬಲವನ್ನು ಅನುಗ್ರಹಿಸಿದಿಯಲ್ಲಾ. ಆದರೂ ನೀನು ನಿನ್ನ ಮುಖವನ್ನು ಮರೆಮಾಡಿಕೊಂಡಾಗ ನಾನು ಕಳವಳಗೊಂಡು
8. ಯೆಹೋವನೇ, ನಿನಗೆ ಮೊರೆಯಿಟ್ಟೆನು; ನನ್ನ ಒಡೆಯನಿಗೆ ಬಿನ್ನವಿಸಿದೆನು.
9. ನನ್ನನ್ನು ಕೊಂದು ಹಾಕಿ ಸಮಾಧಿಗೆ ಸೇರಿಸಿದರೆ ನಿನಗೆ ಲಾಭವೇನು? ಮಣ್ಣು ನಿನ್ನನ್ನು ಸ್ತುತಿಸುವದೋ ಅದು ನಿನ್ನ ನಂಬಿಕೆಯನ್ನು ಹೊಗಳುವದೇನು?
10. ಯೆಹೋವನೇ, ನನ್ನ ಪ್ರಾರ್ಥನೆಯನ್ನು ಕೇಳಿ ಕರುಣಿಸು; ಯೆಹೋವನೇ, ನನ್ನ ಸಹಾಯಕ್ಕೆ ಬಾ ಎಂದು ಹೇಳಿದೆನು.

## ನಿಮ್ಮ ತೀರ್ಮಾನಗಳು ನಿಮ್ಮ ಭವಿಷ್ಯವನ್ನು ನಿರ್ಧರಿಸುತ್ತದೆ!

(ಮುಖ್ಯ ಸಭೆಯಲ್ಲಿ ಪಾಸ್ಟರ್ ಎಸ್ ಸ್ಯಾಮ್ ಸೆಲ್ವರಾಜ್‌ರವರು ಪ್ರಸಂಗಿಸಿದ್ದ)

YOUR DECISION DETERMINES YOUR DESTINY!

**ಈ ಲೋಕದಲ್ಲಿ ಪ್ರತಿಯೊಬ್ಬರು ಒಳ್ಳೆಯ ಸಂಗತಿಗಳು ಆಗಬೇಕೆಂದು ಇಷ್ಟಪಡುತ್ತಾರೆ - ಅನೀರಿಕ್ಷಿತ ಮತ್ತು ನೀರಿಕ್ಷಿತ ಆಶೀರ್ವಾದಗಳು! ಪದನ್ನೋತಿಗಳು! ಆದರೆ ಪ್ರತಿಯೊಬ್ಬರಿಗೆ ಅವರದೇ ಅದ ದೇವರಿಂದ ವಿಷೇಶವಾದ ಕರೆಯುವಿಕೆ ಇರುತ್ತದೆ ಮತ್ತು ಅತನು ಪ್ರತಿಯೊಬ್ಬರನ್ನು ಬೇರೆ ಬೇರೆ ವಿಧಾನಗಳಲ್ಲಿ ದೇವರು ನಡೆಸುವನು- ಆದರೆ ತೀರ್ಮಾನಗಳು ಸರಿಯಾದ ಸಮಯದಲ್ಲಿ ಮಾಡುವಾಗ ನಮ್ಮ ಭವಿಷ್ಯವು ನಿರ್ಧಾರವಾಗುತ್ತದೆ. ನಾವು ಆನೇಕ ಜನರ ಜೀವಿತವನ್ನು ಅಧ್ಯಾಯನ ಮಾಡುವಾಗ ಈ ಸತ್ಯವು ಪ್ರಕಟವಾಗುತ್ತದೆ. ಬನ್ನಿ ನಾವು ಪ್ರವಾದಿಗಳಾದ ಏಲಿಯ, ಎಲಿಷ, ಮತ್ತು ಎಲಿಷನ ಸಹಾಯಕನಾದ ಗೆಹಜಿರವರುಗಳ ಜೀವಿತವನ್ನು ಅಧ್ಯಾಯನವನ್ನು ಮಾಡೋಣ. ಈ ಮನುಷ್ಯರು ಸಮಕಾಲಿನರು.**

### I. ಪ್ರವಾದಿಯಾದ ಏಲಿಯ

ಏಲಿಯನು ಸುಮಾರು ಕ್ರಿ. ಶ. 910-896 ಜೀವಿಸಿದನು. ಈತನು ಗಿಲ್ಯಾದ್ ಪ್ರಾಂತ್ಯದ ತಿಷ್ಬಿಯನು. ಆತನು ಮೊದಲೇ ನಿರ್ಧರಿಸಲ್ಪಟ್ಟನು ಮತ್ತು ದೇವರಿಂದ ಪ್ರವಾದಿಯಾಗಲು ಕರೆಯಲ್ಪಟ್ಟನು. ಸತ್ಯವೇದವು ನಮಗೆ ಆತನ ಹುಟ್ಟು ಮತ್ತು ಆತನ ಕುಟುಂಬದ ಬಗ್ಗೆ ಯಾವುದೇ ಮಾಹಿತಿಕೊಡುತ್ತಾ ಇಲ್ಲ.

ಎಲೀಯನ ಹೆಸರಿನ ಅರ್ಥ ಯೆಹೋವಾ ನನ್ನ ದೇವರು. ಯಾವಾಗ ನಾವು ಎಲೀಯನ ಸಂಪೂರ್ಣ ಜೀವಿತವನ್ನು ನೋಡುವಾಗ ದೇವರು ಅವನನ್ನು ಕರೆದನು ಎಂಬುದನ್ನು ನಾವು ಗಮನಿಸಬೇಕು ಮತ್ತು ಕೊನೆಯಲ್ಲಿ ಕರ್ತನು ಅವನನ್ನು ಪರಲೋಕಕ್ಕೆ ಕರೆದುಕೊಂಡು ಹೋದನು. ಆತನು ಮರಣವನ್ನು ಅನುಭವಿಸಲಿಲ್ಲ. ಆತನಿಗೆ ಯಾವುದೇ ಶವಸಂಸ್ಕಾರ ಆರಾಧನೆ ಇರಲಿಲ್ಲ. ಭೂಮಿಯ ಮೇಲೆ ಅವನು ಪ್ರಾಣಿಗಳ ಕೂದಲಿನಿಂದ ಮಾಡಿದ ಒಳಂಗಿ ಮತ್ತು ಸೊಂಟದ ಸುತ್ತ ನಡುಪಟ್ಟಿಯನ್ನು ಧರಿಸಿ ತಪಸ್ವಿಯಾಗಿ ವಾಸಿಸುತ್ತಿದ್ದನು.

ಅಡನಿಯಲ್ಲಿ ವಾಸಮಾಡುವ ಈ ಮನುಷ್ಯನನ್ನು ದೇವರು ನೋಡಿದನು, ಪವಿತ್ರವಾದ ಜೀವನವನ್ನು ನಡೆಸುತ್ತಾ ಇದ್ದನು. ತನ್ನ ಅದ್ಭುತವಾದ ಯೋಜನೆಯನ್ನು ಮುನ್ನಡೆಸುವದಕ್ಕೆ ಅವನನ್ನು ಆರಿಸಿಕೊಂಡನು. ದೇವರ ಆರಿಸುವಿಕೆಯು ಮನುಷ್ಯನ ವಿಧ್ಯಾರ್ಹತೆ, ಹಣಕಾಸಿನ, ಕುಟುಂಬದ ಹಿನ್ನಲೆಯ ಮೇಲೆ ಆಧಾರವಾಗಿಲ್ಲ. ಎಲೀಯನ ವಿಧ್ಯಾರ್ಹತೆಯು ಯಾವಾಗಲು ದೇವರ ಸ್ವರವನ್ನು ಕೇಳುವದಕ್ಕೆ ತಯಾರು ಆಗಿದ್ದನು ಮತ್ತು ದೇವರು ಏನು ಹೇಳುತ್ತಾನೆ ಅದನ್ನು ಮಾಡುತ್ತಾ ಇದ್ದನು. ದೇವರು ಅವನನ್ನು ಪ್ರವಾದಿಯಾಗಿ ಮಾಡಿದನು. ಅರಸನಾಸ ಅಹಾಬನ ಮತ್ತು ಅಜರ್ಯನ

(3ನೇ ಪುಟಕ್ಕೆ)

# ECHO OF HIS CALL - (1969-2019 GOLDEN JUBILEE YEAR)

## *from your dearly beloved brother...*



**ಯೆಹೋವನು ದಯೆಯೂ ಕನಿಕರವೂ ಉಳ್ಳವನು;**
**ದೀರ್ಘಶಾಂತನೂ ಪ್ರೀತಿಪೂರ್ಣನೂ ಆಗಿದ್ದಾನೆ (ಕೀರ್ತನೆ 145:8)**



**OUR MISSION POLICY**
We should expound and teach the contemporary generation the undiluted teachings of the ancient and early Apostles. It is the need of the hour.

**CHIEF EDITOR**
Angeline Selvakumari Henry, M.A., M.Ed.

**MANAGING EDITOR**
Pastor Alex Samson Sam, B.Th., M.Div.

**ADMINISTRATION**
Bro. N. Prakasam, M.A., General Manager

**EDITORIAL BOARD**
Sis. Jesy Veena Sam
Bro. M. Paulraj, M.A., B.Ed.
Sis. Serena Bevin, M.A., M.Phil., B.Ed.

**EDITOR, PUBLISHER & PRINTER**
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 95661 31858

**E.mail ID**
sam@echoofhiscall.org
biblecor@yahoo.co.in

**WEBSITES**
www.echoofhiscall.org
www.stpaulsmatriculation.com

**YOUTUBE CHANNEL**
Echo of His Call

**ಪ್ರೀತಿಯುಳ್ಳ ಸಹೋದರ ಮತ್ತು ಸಹೋದರಿಯರೆ,**

ಆಶೀರ್ವಾದಲ್ಪಟ್ಟ ನಮ್ಮ ಪ್ರಭುವು ಮತ್ತು ಕರ್ತನಾದ ಯೇಸುಕ್ರಿಸ್ತನ ನಾಮದಲ್ಲಿ ನಿಮಗೆ ಆರಿಸಲ್ಪಟ್ಟ ಶುಭಾಶಯಗಳು.

ನಮ್ಮ ವಿವಿಧ ಸೇವಗಳಿಗೆ ನಿಮ್ಮ ಪ್ರೀತಿ ಮತ್ತು ಕಾಳಜಿಗಾಗಿ ನಾವು ನಿಮಗೆ ಧನ್ಯವಾದಗಳನ್ನು ಹೇಳುತ್ತೇವೆ. ನಿಮ್ಮ ಪ್ರೀತಿಯ ದಯೆಯಿಂದ ನಾವು ಬಹಳವಾಗಿ ಪ್ರೋತ್ಸಾಹವನ್ನು ಹೊಂದಿದ್ದೇವೆ. ದೇವರು ನಿಮ್ಮನ್ನು ಆಶೀರ್ವದಿಸಲಿ.

ನಮ್ಮ ನೆಹಮಿಯ ಸತ್ಯವೇದ ಕಾಲೇಜಿನ ಚೇರಮನ್ ಆದ ಪಾಸ್ಟರ್ ಎಂ. ಮುತ್ತುರವರ ಆರೋಗ್ಯದಲ್ಲಿ ಸುಧಾರಣೆಯಾಗಿದೆ. ನಮ್ಮ ಗೆಳೆಯರು ಯಾರಾರು ಅವರಿಗಾಗಿ ಪ್ರಾರ್ಥನೆ ಮಾಡಿದ್ದಾರೋ ಅವರಿಗೆ ನಮ್ಮ ಧನ್ಯವಾದಗಳು. ದಯಮಾಡಿ ನಿರಂತರವಾಗಿ ಪ್ರಾರ್ಥನೆ ಮಾಡುತ್ತಾ ಇರಿ.

ನಿಮಗೆಲ್ಲಾ ಗೊತ್ತಿರುವ ಹಾಗೆ, ನಾವು ಆತನ ಕರೆಯ ಪ್ರತಿಧ್ವನಿಯ ಮಾಸಪತ್ರಿಕೆ ಸೇವೆಯ ಬಗ್ಗೆ ಹೇಳುವದರಲ್ಲಿ ನಾವು ತುಂಬಾ ವ್ಯಸ್ತವಾಗಿದ್ದೇವೆ. ನೆಹಮೀಯ ಸತ್ಯವೇದ ಕಾಲೇಜ್ ಹಿಂದಿ/ಒಡಿಸ್ಸಾ ಭಾಷೆಗಳು ಮತ್ತು ತಮಿಳು ಭಾಷೆ. ಸಂತ ಪೌಲ ಮೇಟ್ರಿಕ್ಯೇಲ್ಯುಷನ್ ಶಾಲೆ, ಸಭೆಗಳು ಮುಂತಾದವುಗಳು. ದೇವರು ನಮ್ಮ ಎಲ್ಲಾ ಚಟುವಟಿಕೆಗಳನ್ನು ಮತ್ತು ಚೆನ್ನೈ ಪಟ್ಟಣದ ಒಳಗೆ ಮತ್ತು ಹೊರಗಡೆ ಪ್ರಯಾಣಗಳನ್ನು ಆಶೀರ್ವದಿಸಿದ್ದಾನೆ. ನಾವು ನಿರಂತರವಾಗಿ ನಮ್ಮ ಸಂದೇಶಗಳನ್ನು ಹಳ್ಳದಿಂದ ಅರಮನೆಯ ಅಡಿಯಲ್ಲಿ ಮುಂದಿನ ಸಂಚಿಕೆಯಲ್ಲಿ ಮಾಡುತ್ತೇವೆ. ನಾವು ಈ ತಿಂಗಳಲ್ಲಿ ತುಂಬಾ ಕಾರ್ಯನಿರತವಾಗಿದ್ದೇವೆ.

ಮುಂದೆ, ನಮ್ಮ ಪ್ರೀತಿಯ ಸಹೋದರ ಹಾಗು ಆತನ ಕರೆಯ ಪ್ರತಿಧ್ವನಿ ಮಾಸಪತ್ರಿಕೆಯ ಹಿರಿಯ ಸಹ ಸಂಪಾದಕರು ಸಹೋ. ಮ್ಯಾನುವೇಲ್, ಎಂ. ಪಾಲ್‌ರಾಜ್‌ರವರು ಮೇ 25, 2022ರಂದು ಮಹಿಮೆಯಲ್ಲಿ ಸೇರಿದರು. ದಯಮಾಡಿ ನಿಮ್ಮ ಪ್ರಾರ್ಥನೆಗಳಲ್ಲಿ ಅವರ ಕುಟುಂಬಕ್ಕಾಗಿ ಪ್ರಾರ್ಥಿಸಿರಿ. ಆತನು ಅಸ್ವಸ್ಥದಲ್ಲಿರುವಾಗ ನೀವೆಲ್ಲರೂ ಅತನಿಗಾಗಿ ಪ್ರಾರ್ಥನೆ ಮಾಡಿದ್ದಾಕ್ಕಾಗಿ ನಿಮಗೆ ಧನ್ಯವಾದಗಳು.

ದೇವರ ಕ್ರಪೆಯಿಂದ ನಮ್ಮ ನೆಹಮೀಯ ಸತ್ಯವೇದ ಕಾಲೇಜ್‌ನ 23ನೇ ಪದವಿ ಸೇವೆಯು ಜೂನ್ 03, 22 ರಂದು ನಡೆಯಿತು. 23 ವಿಧ್ಯಾರ್ಥಿಗಳು ಪದವಿಯನ್ನು ಪಡೆದುಕೊಂಡು ಮತ್ತು ಭಾರತದ ತಲುಪದ ಭಾಗಗಳನ್ನು ತಲುಪಲು ಉತ್ಸಾಹದಿಂದ ಸೇವೆಗಾಗಿ ಪ್ರತ್ಯೇಕಿಸಿ ಕೊಂಡರು.

ದೇವರ ಕೃಪೆಯಿಂದ, ನಮ್ಮ ನೆಹಮೀಯ ಸತ್ಯವೇದ ಕಾಲೇಜ್ (ಸಾಯಂಕಾಲ ತಮಿಳು ಮತ್ತು ವಸತಿ ಹಿಂದಿ ಮತ್ತು ಒಡಿಸ್ಸಾ) ಜೂನ್ 06, 2022ರಂದು ಪುನಾರಂಭವಾಗುತ್ತದೆ. ನಿಗದಿಪಡಿಸಿದಂತೆ ಮತ್ತು ತರಗತಿಗಳು ಪೂರ್ಣ ಆಕಾರದಲ್ಲಿ ನಡೆಯುತ್ತಿವೆ. ಅದೇ ರೀತಿಯಾಗಿ ಸಂತ ಪೌಲ ಪ್ರೌಢಶಾಲೆಯು ಜೂನ್ 13, 2022 ರಂದು ಪ್ರಾರಭವಾಗುತ್ತದೆ. ಈ ಎಲ್ಲಾ ಸಂಸ್ಥೆಗಳು ಸಫಲವಾಗಿ ನಡೆಯುವಂತೆ ದಯಮಾಡಿ ಪ್ರಾರ್ಥಿಸಿರಿ.

ಈ ಹೊತ್ತಿನ ದಿನಗಳಲ್ಲಿ, ನಮ್ಮ ಕುಟುಂಬದ ಕೆಲವರಿಗೆ ದೈಹಿಕವಾಗಿ ದೇವರ ಸ್ಪರ್ಶದ ಅವಶ್ಯಕತೆ ಇರುವದರಿಂದ ನಮ್ಮ ಸಹೋದ್ಯೋಗಿಗಳ ಕುಟುಂಬ ಎಲ್ಲಾ ಸದಸ್ಯರಿಗೆ ನಿಮ್ಮ ಹೆಚ್ಚಿದ ಪ್ರಾರ್ಥನೆಗಳನ್ನು ನಾವು ಕೋರುತ್ತೇವೆ.

ದೇವರ ರಾಜ್ಯದ ವಿಸ್ತರಣೆಗಾಗಿ ನಮ್ಮ ಬಹುವಿಧದ ಸೇವೆಗಳ ಎಲ್ಲಾ ಅಗತ್ಯಗಳಿಗಾಗಿ ದಯವಿಟ್ಟು ನೆನಪಿಸಿಕೊಳ್ಳಿ.

ಬರುವ ದಿನಗಳಲ್ಲಿ ದೇವರು ನಿಮ್ಮನ್ನು ಶ್ರೀಮಂತವಾಗಿ ಆಶೀರ್ವದಸಲಿ.

**ಕ್ರಿಸ್ತ ಯೇಸುವಿವಲ್ಲಿ ನಿಮ್ಮ ಸೇವಕರುಗಳು,**

**ಪಾ. ಎಸ್ ಸ್ಯಾಮ್ ಸೆಲ್ವರಾಜ್ ಮತ್ತು ಅಲೆಕ್ಷೆ ಸ್ಯಾಮಸನ್ ಸ್ಯಾಮ್**
(+91) 98412 71858 / 98410 71858, E.mail : samselvaraj333@gmail.com

**Our Ministries:** ECHO OF HIS CALL Monthly Magazines (16 languages) · BIBLECOR - Postal Courses (3 languages) · Online Courses · Theological Correspondence Courses (2 languages) · Church Planting · Nehemiah Bible Colleges · Gospel Printing Press · Great Commission Partners · St. Paul's Matriculation School · Crusades · Community Development

*(1ನೇ ಪುಟದಿಂದ...)*

ಆಡಳಿತದಲ್ಲಿ, ಎಲೀಯನ ದಿನಗಳಲ್ಲಿ ಒಮ್ರಿಯ ಮಗನಾದ ಅಹಾಬಾನು ಇಸ್ರಾಯೆಲ್ಯನ ಅರಸನಾದನು ಮತ್ತು ಇವನು ದೇವರ ದೃಷ್ಟಿಯಲ್ಲಿ ಅವನ ಹಿಂದೆ ಇದ್ದವರಿಗಿಂದ ಬಹಳ ದುಷ್ಟ ಕಾರ್ಯಗಳನ್ನು ಮಾಡಿದನು. ನೆಬಾಟನ ಮಗನಾದ ಯಾರೊಬ್ಬಾಮನ ಪಾಪಗಳನ್ನು ಮಾಡುವುದನ್ನು ಅವನು ಕ್ಷುಲ್ಲಕವೆಂದು ಪರಿಗಣಿಸಲಿಲ್ಲ, ಆದರೆ ಅವನು ಸಿಡೋನಿಯನ್ನರ ಅರಸ ಎತ್ಬಾಲ್ನ ಮಗಳು ಈಜೆಬೆಲಳನ್ನು ಮದುವೆಯಾದನು. ಬಾಳನನ್ನು ಸೇವಿಸಲು ಮತ್ತು ಅವನನ್ನು ಆರಾಧಿಸಲು ಪ್ರಾರಂಭಿಸಿದನು. ಅವನು ಸಮಾರ್ಯದಲ್ಲಿ ಬಾಳನ ದೇವಾಲಯದಲ್ಲಿ ಬಾಳನಿಗೋಸ್ಕರ ಯಜ್ಞವೇದಿಯನ್ನು ನಿರ್ಮಿಸಿದನು (1 ಅರಸುಗಳು 16:30-32). ಇಸ್ರಾಯೇಲ್ಯ ಅರಸನಾಗಿ ಪರಲೋಕ ಮತ್ತು ಭೂಲೋಕದ ದೇವರನ್ನು ಆರಾಧಿಸುವ ಬದಲು ಅನ್ಯದೇವರನ್ನು ಆರಾಧಿಸಿದನು.

### 1. ಎಲೀಯನು ಮಳೆಯಾಗುವುದಿಲ್ಲ ಮತ್ತು ಮಳೆ ಇಲ್ಲ ಎಂದು ಹೇಳಿದನು :

ಎಲೀಯನು ದೇವರ ವಾಕ್ಯವನ್ನು ಅರಸನಾದ ಬಳಿಗೆ ತೆಗದುಕೊಂಡು ಹೋಗಿ ಹೀಗೆ ಹೇಳಿದನು, ಅಲ್ಲಿ ಯಾವುದೇ ಮಂಜು ಇಲ್ಲ ಮತ್ತು ಮೂರು ವರ್ಷ ಮಳೆ ಇರುವುದಿಲ್ಲ, ನನ್ನ ಮಾತಿನ ಹೊರತಾಗಿ, ಆತನು ಮೂರುವರೆ ವರ್ಷ ಮಳೆಬರುವುದಿಲ್ಲ ಎಂದು ಹೇಳಿದನು ಅಷ್ಟೆ. ಆತನು ಅರಸನ ಮುಂದೆ ಭಯ ಪಡಲಿಲ್ಲ. ಕರ್ತನು ಹೇಳಿದ್ದನು ಹೇಳಿದನು.

ಎಲೀಯನು ಪರಿಶುದ್ದ ಮತ್ತು ದೇವ ಮನುಷ್ಯನಾಗಿ ಅವನ ನಂಬಿಕೆಯು ದೇವರಲ್ಲಿ ದೊಡ್ಡದಾಗಿತ್ತು. ಆತನು ಧೈರ್ಯವುಳ್ಳನಾಗಿದ್ದನು ಮತ್ತು ಅದರ ಪರಿಣಾಮದ ಬಗ್ಗೆ ಎಂದಿಗೂ ಭಯ ಪಡಲಿಲ್ಲ.

### 2. ಆತನು ವಿಧೇಯತೆಯ ಪ್ರವಾದಿಯಾಗಿದ್ದನು.

ದೇವರು ಎಲೀಯನಿಗೆ ಈ ರೀತಿಯಾಗಿ ಹೇಳಿದನು, **"ನೀನು ಈ ಸ್ಥಳವನ್ನು ಬಿಟ್ಟು ಪೂರ್ವದಿಕ್ಕಿಗೆ ಹೋಗಿ ಯೊರ್ದನ್‌ಹೊಳೆಯ ಆಚೆಯಲ್ಲಿರುವ ಕೆರೀತ್‌ಹಳ್ಳದಲ್ಲಿ ಅಡಗಿಕೋ..."** (1 ಅರಸು 17:3). ಕರ್ತನು ಹೇಳಿದ ಸ್ಥಳಕ್ಕೆ ಹೋದನು. ಕರ್ತನು ವಾಗ್ದನ ಮಾಡಿದ ಹಾಗೆ ಕಾಗೆಗಳು ಅತನ ಆಹಾರವನ್ನು ತಂದು ಕೊಟ್ಟವು ಮತ್ತು ಮಾಂಸವನ್ನು ಬೆಳಿಗ್ಗೆ ಮತ್ತು ಸಾಯಂಕಾಲ. ಬಹಳ ವರ್ಷಗಳ ಕಾಲ ಅಲ್ಲಿ ಯಾವುದೇ ಮಳೆ ಇರಲಿಲ್ಲ, ಹಳ್ಳವು ಬತ್ತಿ ಹೊಗುವದಕ್ಕೆ ಬಂದಿತು. ನಂತರ ದೇವರು ಅವನಿಗೆ, ಎದ್ದೇಳು ಚೀದೋನ್ಯರ ಚಾರೆಪ್ತಾ ಊರಿಗೆ ಹೋಗು. ವಿಧವೆಯ ಬಳಿಯಲ್ಲಿ ಇರು. ಈ ಅಜ್ಞೆಗೆ ಎಲೀಯನು ವಿಧೇಯನಾದನು. ಅವನು ವಿಧವೆಯನ್ನು ಭೇಟಿಯಾಗಿ ಆಕೆಗೆ ರೊಟ್ಟಿಯನ್ನು ಮತ್ತು ನೀರನ್ನು ಕೇಳಿದನು. ಅವಳಿಗೇ ಸ್ವಲ್ಪವೇ ಉಳಿದಿದ್ದರೂ ಅವನು ಕೇಳಿದ್ದನ್ನು ಕೊಟ್ಟಳು. ಅದುದರಿಂದ, ಅವಳು ಸಮೃದ್ದಿಯಾಗಿ ಆಶೀರ್ವದಿಸಲ್ಪಟ್ಟಳು. ಆ ಜಾಗವು ಮಳೆ ಬರುವವರೆಗೆ ಆಶೀರ್ವದಿಸಲ್ಪಟ್ಟಿತ್ತು. ನಂತರ ಆಕೆಯ ಮಗನು ಸತ್ತನು. ಎಲೀಯನು ಆ ಮಗುವನ್ನು ಮತ್ತೆ ಬದುಕಿಸಿದ.

### 3. ಅವನು ಧೈರ್ಯವುಳ್ಳ ಪ್ರವಾದಿಯಾಗಿದ್ದನ (1 ಅರಸುಗಳು 18:18-39) :

ದೇವರು ಎಲೀಯನಿಗೆ ಅರಸನಾದ ಅಹಾಬನನ ಮುಂದೆ ಕಾಣುವದಕ್ಕೆ ಕಳುಹಿಸಿದನು, ಕರ್ಮೆಲ್ ಪರ್ವತದ ಮೇಲೆ ಎಲ್ಲಾ ಇಸ್ರಾಯೇಲ್ಯರನ್ನು ಮತ್ತು ಬಾಳನ ಎಲ್ಲಾ ೪೫೦ ಪ್ರವಾದಿಗಳು ಮತ್ತು ಅಶೇರಾನ 400 ಪ್ರವಾದಿಗಳನ್ನು ಒಟ್ಟುಗೂಡಿಸಲು ರಾಜನನ್ನು ಕೇಳಿದನು. ಎಲೀಯನು ಜನರಿಗೆ ಎಲ್ಲಿಯವರೆಗೆ ನೀವು ಎರಡು ಅಭಿಪ್ರಾಯವುಳ್ಳವರಾಗಿದ್ದೀರಿ? ಒಂದು ವೇಳೆ ಕರ್ತನು ದೇವರಾಗಿದ್ದರೆ, ಆತನನ್ನು ಹಿಂಬಾಲಿಸಿರಿ, ಒಂದು ವೇಳೆ ಬಾಳ್ ಆಗಿದ್ದರೆ ಅವನನ್ನು ಹಿಂಬಾಲಿಸಿರಿ ಎಂದು ಜನರನ್ನು ಕೇಳಿದನು. ಹಾಗೆಯೇ ಆತನು ಹೀಗೆ ಹೇಳಿದನು, ನಮಗೆ ಅವರು ಎರಡು ಹೋರಿಗಳನ್ನು ಕೊಡಿರಿ, ಒಂದು ಹೋರಿಯನ್ನು ತಮಗಾಗಿ ಇಟ್ಟುಕೊಳ್ಳಲಿ, ಅದನ್ನು ತುಂಡಾಗಿ ಕತ್ತರಿಸಿರಿ, ಅದನ್ನು ಕಟ್ಟಿಗೆ ಮೇಲೆ ಇಡಿರಿ. ಆದರೆ ಅದರ ಮೇಲೆ ಬೆಂಕಿಯನ್ನು ಹಾಕಬೇಡಿರಿ. ನಾನು ಇನ್ನೊಂದು ಹೋರಿಯನ್ನು ತಯಾರು ಮಾಡುತ್ತಾನೆ. ಅದನ್ನು ಕಟ್ಟಿಗೆ ಮೇಲೆ ಇಟ್ಟು ಬೆಂಕಿಯನ್ನು ಹಾಕುವುದಿಲ್ಲ, ನೀವು ನಿಮ್ಮ ದೇವರುಗಳನ್ನು ಕರೆಯಿರಿ, ನಾನು ಕರ್ತನಾದ ದೇವರನ್ನು ಕರೆಯುತ್ತೇನೆ. ಆತನು ಬೆಂಕಿಯ ಮೂಲಕ ಉತ್ತರಿಸುತ್ತಾನೆ. ಆತನು ದೇವರು. ಎಲ್ಲಾ ಜನರು ಬಹಳ ಒಳ್ಳೆಯದೆಂದು ಹೇಳಿದರು. ಈಗ ಬಾಳನ ಪ್ರವಾದಿಗಳಿಗೆ ಎಲೀಯನು ಈ ರೀತಿಯಾಗಿ ಹೇಳಿದನು. ನಿಮಗಾಗಿ ಒಂದು ಹೋರಿಯನ್ನು ತೆಗೆದು ಕೊಂಡು ನಿಮ್ಮನ್ನು ನೀವು ಮೊದಲು ಸಿದ್ದಪಡಿಸಿ ಕೊಳ್ಳಿರಿ. ನೀವು ಬಹಳವಾಗಿದ್ದರಿಂದ ಮೊದಲು ನಿಮ್ಮ ದೇವರನ್ನು ಕರೆಯಿರಿ. ಆದರೆ ಬೆಂಕಿಯನ್ನು ಹಾಕಬಾರದು. ಅವರಿಗೆ ಕೊಡಲ್ಪಟ್ಟದನ್ನು ಹೋರಿಯನ್ನು ತೆಗೆದು ಕೊಂಡು ತಯಾರು ಮಾಡು ಮುಂಜಾನೆಯಿಂದ ಸಾಯಂಕಾಲ ದವರಗೆ ಬಾಳನನ್ನು ಕರೆದರು. ಬಾಳನೇ ನಮ್ಮನ್ನು ಕೇಳು, ಕತ್ತಿಗಳಿಂದ ತಮ್ಮ ದೇಹಗಳನ್ನು ಗಾಯ ಮಾಡಿಕೊಂಡರು. ಅವರ ದೇಹದಿಂದ ರಕ್ತವು ಹೊರಬಂದಿತು. ಆದರೆ ಯಾವುದೇ ಶಬ್ದವಿಲ್ಲ, ಯಾರು ಉತ್ತರಿಸಲಿಲ್ಲ. ಅವರು ಸೋಲನ್ನು ಒಪ್ಪಿಕೊಂಡರು.

ನಂತರ ಎಲೀಯನು ಕರ್ತನ ಹೆಸರಿನಲ್ಲಿ ಕಲ್ಲುಗಳಿಂದ ಬಲಿಪೀಠವನ್ನು ನಿರ್ಮಿಸಿದನು. ಅವನು ಬಲಿಪೀಠದ ಸುತ್ತಲೂ ಕಂದಕವನ್ನು ಮಾಡಿದನು. ಕಟ್ಟಿಗೆಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿದನು. ಹೋರಿಗಳ ತುಂಡುಗಳನ್ನು ಕಟ್ಟಿಗೆಯಲ್ಲಿ ಇಟ್ಟನು. ನಾಲ್ಕು ಗಡಿಗೆಗಳಿಯಲ್ಲಿ ನೀರನ್ನು ತುಂಬಿದನು. ಅದನ್ನು ಸುಟ್ಟ ಯಜ್ಞದ ಮೇಲೆ ಮತ್ತು ಕಟ್ಟಿಗೆಯ ಮೇಲೆ ಸುರಿಯಬೇಕು. ನಂತರ ಅವರಿಗೆ ಎರಡನೆಯ ಸಾರಿ ಮಾಡಿರಿ ಎಂದು ಹೇಳಿದನು. ಆತನು ಅವರಿಗೆ ಮೂರನೆಯ ಸಾರಿ ಮಾಡಿರಿ ಎಂದು ಹೇಳಿದನು. ಅವರು ಮೂರನೇಯ ಸಾರಿ ಮಾಡಿದರು. ಅವನು ಕಂದಕದಲ್ಲಿ ನೀರನ್ನು ತುಂಬಿದನು. ಮತ್ತು ಸಾಯಂಕಾಲ ಯಜ್ಞವನ್ನು ಅರ್ಪಿಸುವ ಸಮಯದಲ್ಲಿ ಅದು ಸಂಭವಿಸಿತು. ಪ್ರವಾದಿಯಾದ ಎಲೀಯನು ಹತ್ತಿರ ಬಂದು ಹೀಗೆ ಹೇಳಿದನು, **"ಅಬ್ರಹಾಮ್ ಇಸಾಕ್ ಇಸ್ರಾಯೇಲ್ಯರ ದೇವರೇ, ಯೆಹೋವನೇ, ನೀನೊಬ್ಬನೇ ಇಸ್ರಾಯೇಲ್ಯರ ದೇವರಾಗಿರುತ್ತೀ ಎಂಬದನ್ನೂ ನಾನು ನಿನ್ನ ಸೇವಕನಾಗಿರು ತ್ತೇನೆಂಬದನ್ನೂ ಇದನ್ನೆಲ್ಲಾ ನಿನ್ನ ಅಪ್ಪಣೆಯ ಮೇರೆಗೆ ಮಾಡಿದೆನೆಂಬದನ್ನೂ ಈ ಹೊತ್ತು ತೋರಿಸಿ ಕೊಡು"** (1 ಅರಸು 18:36).

ನಂತರ ಕರ್ತನಾದ ದೇವರ ಬೆಂಕಿಯು ಬಂದು ದಹನಬಲಿಯನ್ನು ದಹಿಸಿತು.ಮತ್ತು ಮರ ಮತ್ತು ಕಲ್ಲುಗಳು ಮತ್ತು ಧೂಳು ಮತ್ತು ಅದು ಕಂದಕದಲ್ಲಿದ್ದ ನೀರನ್ನು ನೆಕ್ಕಿತು. ಈಗ ಎಲ್ಲಾ ಜನರು ನೋಡಿದರು. ಅವರು ಮುಖಗಳನ್ನು ಕೆಳಗೆ ಮಾಡಿ ಹೀಗೆ ಹೇಳಿದರು, ಕರ್ತನು ಆತನೇ ದೇವರು, ಎಲೀಯನು ಅರ್ಧಮನಸ್ಸಿನ ಇಸ್ರಾಯೇಲ್ಯರ ಮುಂದೆ ಸಾಬಿತು ಪಡಿಸಿದನು. ಪರಲೋಕದಿಂದ ಬೆಂಕಿಯನ್ನು ತರುವದರಿಂದ ಕರ್ತನು ದೇವರಾಗಿದ್ದಾನೆಂಬುವುದು ಗೊತ್ತಾಯಿತು.

ನಮ್ಮ ದಿನಗಳಲ್ಲಿ, ಇಂತಹ ಸೇವಕರು ಗಳನ್ನು ಮತ್ತು ಪ್ರವಾದಿಗಳನ್ನು ನೋಡುವುದು ಬಹಳ ಅಪರೂಪವಾಗಿದೆ. ಈ ಹೊತ್ತಿನ ದಿನಗಳಲ್ಲಿ ಅದ್ಭುತ ಕಾರ್ಯ ಅದಾಗ ಅಥವಾ ಪ್ರವಾದನೆಯ ವಾಕ್ಯವು ಪರಿಪೂರ್ಣವಾದಗ. ಇಂತಹ ಸೇವಕರುಗಳನ್ನು ನಾವು ನೋಡ ಬಹುದಲ್ಲವೇ? ಕೆಲವು ಕುಟುಂಬ ಗಳನ್ನು ಭೇಟಿಯಾಗ ಅವರ ಪ್ರಾರ್ಥನೆಯಿಂದ ಇದು ಆಯಿತು ಎಂದು ಹೇಳಿಕೊಳ್ಳುತ್ತಾರೆ. ದೇವರ ಕಾಳಜಿಯ ಸೇವಕನ ಕ್ಯಾಮರಾ ತಂಡವು ನಿಜವಲ್ಲ. ಅಂತಹ ಮನೆಗಳಿಗೆ ಎಲ್ಲಾ ಮಾಧ್ಯಮ ಸಲಕರಣೆ ಗಳೊಂದಿಗೆ ಭೇಟಿ ನೀಡುವುದು ಮತ್ತು ಆ ಕುಟುಂಬದ ಸದಸ್ಯರ ಸುತ್ತ ಶಿಬಿರಗಳನ್ನು ಮಾಡುವುದು ಮತ್ತು ಅದನ್ನು ವ್ಯಾಪಾರ ಮಾಡುವುದು. ಅಂತಹ ವ್ಯಾಪಾರ ಪ್ರವಾದಿಗಳನ್ನು ಬೆಂಬಲಿಸುವ ಜನರು ಸಹ ಹೆಚ್ಚುತ್ತಿದ್ದಾರೆ. ದೇವರು ಅದ್ಭುತ ಕಾರ್ಯವನ್ನು ಮಾಡುವವ ನಾಗಿದ್ದಾನೆ. ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ (ಮತ್ತಾಯ 10:8).

## II. ಎಲೀಷ ಪ್ರವಾದಿ

ಕರ್ತನು ಹೇಳಿದ ಹಾಗೆ, ಪ್ರವಾದಿಯಾದ ಎಲೀಯನು ಎಲೀಷನನ್ನು ಭೇಟಿಯಾದ, ಅವನು ಹನ್ನೆರಡನೆಯ ಜೋಡಿ ಎತ್ತುಗಳೊಂದಿಗೆ ಉಳುಮೆ ಮಾಡುತ್ತಿದ್ದಾಗ ಮತ್ತು ಅವನ ಮೇಲಂಗಿಯನ್ನು ಅವನ ಸುತ್ತಲೂ ಎಸೆದನು. ಎಲೀಷನು ಅವನನ್ನು

ಹಿಂಬಾಲಿಸಿದನು ಮತ್ತು ಅವನ ಸಹಾಯಕನಾದನು (1 ಅರಸುಗಳು 19:19). ಕರ್ತನು ಎಲೀಯನನ್ನು ಜೀವಂತವಾಗಿ ತೆಗದುಕೊಂಡು ಹೋದ ನಂತರ, ಎಲೀಷನು ಜೋರಾಮ್, ಯೆಹು ಮತ್ತು ಜೋವಾಜ್ ಆಳ್ವಿಕೆಯಲ್ಲಿ ದೊಡ್ಡ ಅದ್ಭುತಕಾರ್ಯ ಮಾಡುವ ಎಲೀಷನು ಪ್ರವಾದಿಯಾದನು.

ಎಲೀಯನ ಕೆಳಗೆ ಎಲೀಷನ ತರಬೇತಿಯು ಬಹಳ ಕಷ್ಟಕರವಾಗಿತ್ತು. ಯಾರು ಯಾರು ತಮ್ಮನ್ನು ಕಷ್ಟಕರ ಕೆಲಸದಲ್ಲಿ ತೊಡಗಿಸಿ ಕೊಳ್ಳುತ್ತಾರೋ ಮತ್ತು ಕಷ್ಟಕರವಾದ ತರಬೇತಿ ಮಾತ್ರ ಒಳ್ಳೆಯ ದೇವರಸೇವಕರಾಗುವದಕ್ಕೆ ಸಹಾಯ ವಾಗುತ್ತದೆ. ಕಠಿಣ ಶ್ರಮಕ್ಕೆ ಮಣಿಯಲು ನಿರಾಕರಿಸವ ಜನರಿಂದ ಯಾವುದೇ ದೊಡ್ಡದನ್ನು ಸಾಧಿಸಲಾಗುವುದಿಲ್ಲ. ಸರಿಯಾದ ತರಬೇತಿ ಮತ್ತು ಸರಿಯಾದ ಚಟುವಟಿಕೆಗಳು. ಕೇವಲ ಭಾನುವಾರ ಆರಾಧನೆಗೆ ಹಾಜರಾಗುವ ಮೂಲಕ ದೇವರಿಗೆ ದೊಡ್ಡ ತ್ಯಾಗವನ್ನು ಮಾಡುತ್ತಿದ್ದೇವೆ ಎಂದು ಭಾವಿಸುವ ಜನರು ದೇವರ ಮಹಾನ್ ಸೇವಕರಾಗಲು ಸಾಧ್ಯವಿಲ್ಲ.

### 1. ಎಲೀಷನು ದೇವರ ಸೇವಗೆ ಕರೆದ ವ್ಯಕ್ತಿಯೊಂದಿಗೆ ಒಬ್ಬನಾಗುತ್ತಾನೆ.

ಯಾವಾಗ ಎಲೀಯ ಮತ್ತು ಎಲೀಷರು ಗಿಲ್ಗಾಲ್‌ನಲ್ಲಿ ಸೇವೆ ಮಾಡುತ್ತಿರುವಾಗ, ಎಲೀಯನು ತಕ್ಷಣ ಎಲೀಷನಿಗೆ ಹೀಗೆ ಹೇಳಿದನು. ದಯಮಾಡಿ ಇಲ್ಲೆ ಇರು, ಕರ್ತನು ನನ್ನನ್ನು ಬೇತೇಲಿಗೆ ಕಳುಹಿಸಿದ್ದಾನೆ. ಆದರೆ ಎಲೀಷನು ತನ್ನ ನಾಯಕನನ್ನು ಬಿಡದೆ ಗಟ್ಟಿಯಾಗಿ ಇದ್ದನು. ಅದುದರಿಂದ ಆತನಿಗೆ ಹೀಗೆ ಹೇಳಿದನು, ಎಲ್ಲಿ ಕರ್ತನು ಜೀವಿಸುತ್ತಾನೋ, ಅಲ್ಲಿ ನಿನ್ನ ಆತ್ಮವು ಜೀವಿಸುತ್ತದೆ. ನಾನು ನಿನ್ನನ್ನು ಬಿಡುವುದಿಲ್ಲ. ಎಲ್ಲೆಲ್ಲಿ ಎಲೀಯನು ಹೋಗುತ್ತಾನೆ ಅವನನ್ನು ಹಿಂಬಾಲಿಸಿದನು.

ಅದುದರಿಂದ ಅವರು ಬೇತೇಲ್‌ದಿಂದ ಯೇರಿಕೊಗೆ ಹೋದರು. ಯೆರಿಕೋದಿಂದ ಯೋರ್ದಾನ್‌ಗೆ ಹೋದರು. ಈ ಎಲ್ಲಾ ಸ್ಥಳಗಳಲ್ಲಿ ಎಲೀಯನು ತನ್ನ ಸಹಾಯಕನನ್ನು ಒಂಟಿಗನಾಗಿ ತೊರೆಯುವದಕ್ಕೆ ಪ್ರಯತ್ನಿಸಿದನು. ಆದರೆ ಎಲೀಷನು ತನ್ನ ನಾಯಕನಾದ ಎಲೀಯನನ್ನು ಸ್ವಲ್ಪಹೊತ್ತು ಬಿಡುವದಕ್ಕೆ ತಯಾರು ಇರಲಿಲ್ಲ. ಆದರೆ ಎಲ್ಲೆಲ್ಲಿ ತನ್ನ ನಾಯಕನು ಹೋದನು ಅವನನ್ನು ಹಿಂಬಾಲಿಸಿದನು.

ಯೋರ್ದಾನ್‌ನಲ್ಲಿ ಕೂಡ, ಎಲೀಯನು ಯೋರ್ದಾನ್ ನದಿಯನ್ನು ದಾಟಲು ಬಯಸುವುದಾಗಿ ಹೇಳಿ ಎಲೀಷನನ್ನು ಬಿಡಲು ಬಯಸಿದನು. ಎಲೀಷನು ತಾನು ಕೂಡ ಅತನೊಂದಿಗೆ ಯೋರ್ದಾನ್ ನದಿಯನ್ನು ದಾಟುವುದಕ್ಕೆ ಒತ್ತಾಯಿಸಿದನು. ತನ್ನ ನಾಯಕನನ್ನು ಹಿಂಬಾಲಿಸುವದರಲ್ಲಿ ಆತನು ದೃಢನಾಗಿರು ವದರಿಂದ, ಎಲೀಷನು ಕೂಡ ಎಲೀಯನೊಂದಿಗೆ ಯೋರ್ದಾನ್ ನದಿಯನ್ನು ದಾಟಿದನು. ಆದರೆ ಯೊರ್ದಾನ್ ನದಿಯನ್ನು ದಾಟುವದಕ್ಕೆ ಮುಂಚೆ, ಪ್ರವಾದಿಯಾದ ಎಲೀಯನು ತನ್ನ ಕಂಬಳಿಯನ್ನು ಮಡಚಿ ನೀರನ್ನು ಹೊಡೆದನು. ನದಿಯು ಇಭ್ಭಾಗವಾಯಿತು. ಅವರು ನಡೆದುಕೊಂಡು ಹೋಗುವದಕ್ಕೆ ದಾರಿ ಮಾಡಿಕೊಟ್ಟಿತು. ಇಬ್ಬರು ನದಿಯನ್ನು ದಾಟಿದರು.

ಈಗ ಎಲೀಯನ್ನು ತಾನು ಈ ಲೋಕವನ್ನು ಬೇಗಬಿಡುತ್ತೇನೆ ಎಂದು ಎಲೀಷನಿಗೆ ಹೇಳಿದನು. ನಾನು ನಿನ್ನಿಂದ ದೂರವಾಗುವ ಮೊದಲು ನಾನು ನಿಮಗಾಗಿ ಏನು ಮಾಡಬೇಕೆಂದು ಕೇಳು. ಎಲೀಷನು ಪತ್ಯುತ್ತರವಾಗಿ ಹೀಗೆ ಹೇಳಿದನು, ನಿನ್ನ ಆತ್ಮದಲ್ಲಿ ನನಗೆ ಎರಡರಷ್ಟು ನನ್ನ ಮೇಲೆ ಬೇಕು. ಎಲೀಯನು ಅವನಿಗೆ ನೀನು ಬಹಳ ಕಷ್ಟಕರವಾದದ್ದನ್ನು ಕೇಳಿದ್ದೀಯಾ. ಏನೇ ಹಾಗಲಿ, ನಾನು ನಿನ್ನಿಂದ ತೆಗದುಕೊಳ್ಳುವಾಗ ನೀನು ನನ್ನನ್ನು ನೋಡಿದಾಗ ಅದು ನಿನ್ನದಾಗುತ್ತದೆ. ಆದರೆ ನೀನು ನೋಡದೆ ಹೋದರೆ ಅದು ನಿನಗೆ ದೊರಕುವುದಿಲ್ಲ. ಎಲೀಷನು ಎಲೀಯನನ್ನು ಬಹಳ ಗಮನವಿಟ್ಟು ನೋಡಿದನು. ಬೆಂಕಿಯ ರಥವು ಕುದುರೆಗಳೊಂದಿಗೆ ಇದ್ದಕ್ಕಿದ್ದಂತೆ ಕಾಣಿಸಿಕೊಂಡಿತು ಮತ್ತು ಎಲೀಯನು ಆ ರಥದಲ್ಲಿ ಪರಲೋಕಕ್ಕೆ ಹೋದನು. ಎಲೀಷನು ಜೋರಾಗಿ ಕಿರಿಚಿದನು ಮತ್ತು ತನ್ನ ನಾಯಕನು ಪರಲೋಕಕ್ಕೆ ಏರಿದಕ್ಕೆ ದುಃಖ ಪಟ್ಟನು. ಎಲೀಯನಿಂದ ಬಿದ್ದಂತಹ ನಿಲುವಂಗಿಯನ್ನು ಅವನು ಎತ್ತಿಕೊಂಡು ಹಿಂತುರಿಗಿ ಹೋದನು ಮತ್ತು ಯೋರ್ದಾನ್ ನದಿಯ ಬಳಿಯಲ್ಲಿ ನಿಂತನು (2 ಅರಸು 2:12-13).

### 2. ಎಲೀಷನು ಎಂದಿಗೂ ನಿರಾಶೆಗೊಳ್ಳಲಿಲ್ಲ.

ತನ್ನ ನಾಯಕರ ಮಾತುಗಳು ಮತ್ತು ಚಟುವಟಿಕೆಗಳಿಂದ ಅವನು ಅನೇಕ ಸಾರಿ ಪರೀಕ್ಷಿಸಲ್ಪಟ್ಟಿದ್ದಾನೆಂದು ಎಲೀಷನಿಗೆ ತಿಳಿದಿತ್ತು. ಅವನು ಎಂದಿಗೂ ನಿರಾಶೆಗೊಳ್ಳಲಿಲ್ಲ. **ಕಷ್ಟದಲ್ಲಿರುವವರಿಗೆ ಸಹಾಯ ಮಾಡಲು ದೇವರು ಶಕ್ತನು. ಅವರು ಎಂದಿಗೂ ಆಶಾಭಂಗ ಪಡುವುದಿಲ್ಲ.** ನಿಮ್ಮ ಜೀವನದಲ್ಲಿ ಏನಾದರೂ ಸಂಭವಿಸಿಲ್ಲ ಎಂದು ನೀವು ಭಾವಿಸಬಹುದು. ನಿಮ್ಮ ಪ್ರಾರ್ಥನೆಗಳಿಗೆ ಇನ್ನೂ ಉತ್ತರಸಿಕ್ಕಿಲ್ಲ. ದಿನಗಳು ಮತ್ತು ಹಣವು ವಿನಾ ಖರ್ಚು ಆಗುತ್ತಾ ಇದೆ. ನೀವು ಕರ್ತನ ಸೇವೆ ಮಾಡಿದ್ಯಾಗೂ, ಎಲ್ಲವೂ ಸೋಲಿನ ಕಡೆಗೆ ಹೋಗುತ್ತದೆ. ದೇವರು ಇದ್ದಾನೋ ಎಂದು ನೀವು ಪ್ರಶ್ನಿಸಬಹುದು?

ನೀವು ನಿರಾಶೆಗೊಂಡಿದ್ದಿರಾ? ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಧೈರ್ಯ ವಾಗಿರಿ. ದೇವರು ನಿಶ್ಚಯವಾಗಿ ಅನಿರಿಕ್ಷಿತವಾಗಿ ಅದ್ಭುತ ಕಾರ್ಯಗಳನ್ನು ನಿಮ್ಮ ಜೀವನದಲ್ಲಿ ಮಾಡುವನು! ಎಲೀಷನ ಹಾಗೆ ನಿಮ್ಮನ್ನು ನೀವು ಮಾರ್ಪಡಿಸಿ ಕೊಳ್ಳಿರಿ. ಒಂದು ವೇಳೆ ಆದರೆ, ಸಮಯವು ನಿಶ್ಚಯವಾಗಿ ಬದಲಾವಣೆ ಯಾಗುತ್ತದೆ! ಪರಿಸ್ಥಿತಿಗಳು ಬದಲಾಗುತ್ತವೆ. ನಮ್ಮ ಕರ್ತನು ಬದಲಾಗುವುದಿಲ್ಲ.

ಎಲೀಯನನ್ನು ಕರ್ತನು ತೆಗೆದು ಕೊಂಡನು ಆದರೂ, ಎಲೀಷನು ಅತ್ತನು, ನನ್ನ ತಂದೆಯೇ, ನನ್ನ ತಂದೆಯೇ. ಆತನು ತನ್ನ ನಂಬಿಕೆಯನ್ನು ಬಿಟ್ಟು ಕೊಡಲಿಲ್ಲ. ಆತನು ನೀರೀಕ್ಷೆಯನ್ನು ಬಿಡಲಿಲ್ಲ. ತನಗಿರು ಕರೆಯುವಿಕೆ ಮತ್ತು ತನ್ನ ತಲೆಯ ಮೇಲೆ ಇರುವ ಅಭಿಷೇಕವನ್ನು ತಿರಸ್ಕಾರ ಮಾಡಲಿಲ್ಲ. ಆತನು ಕೇವಲ ಪರಲೋಕದ ಕಡೆಗೆ ಮುಖಮಾಡಿ ಅತ್ತನು.

*(6ನೇ ಪುಟಕ್ಕೆ)*


नहेम्याह बाइबल कॉलेज
रेसिडेन्शल कॉलेज, चेन्नई।

ECHO OF HIS CALL 1969-2019 GOLDEN JUBILEE (ECHO GROUP)

माध्यमः हिन्दी

Regd. Candidate for Membership ATA NEHEMIAH BIBLE COLLEGE CHENNAI ★ ECHO OF HIS CALL ★ Estd. 1969

*सदस्यता के लिए पंजीकृत उम्मीदवार* - ATA

सुविख्यात अंतर्राष्ट्रीय मसीही अगुवे तथा पिछले 53 वर्षों से सेवारत वरिष्ठ पासवान

सर्टिफिकेट इन थियोलॉजी – 1 साल
डिप्लोमा ऑफ थियोलॉजी – 2 साल

योग्यता 10 वी या अधिक जल्दी करें!

**Contact : The Chairman, Nehemiah Bible College.**

**10, MOHAMMED ABDULLAH 2ND STREET, CHEPAUK, CHENNAI - 600 005, INDIA.**
**Phone : (+91-44) 2852 8282, Cell : (+91) 98410 71852 / 95661 31858**
E.mail : sam@echoofhiscall.org / Website : www.echoofhiscall.org

★ ऑनलाइन कक्षाएं उपलब्ध हैं ★

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು



**ಹಂಚುವುದು (ಗಲಾತ್ಯ.6:2), ಪ್ರೋತ್ಸಾಹಿಸುವುದು (ರೋಮಾಪುರ.12:13 )**

**ತ್ವರಿತಗೊಳಿಸುವುದು ( II ತಿಮೋಥಿ. 1:6 )**

**(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)**

## ಸ್ತೋತ್ರಕ್ಕಾಗಿ ಅಂಶಗಳು

| | | |
|---|---|---|
| ಜುಲೈ 19 | : | ದೇವರ ಕೃಪೆಯಿಂದ ನಾವು ತಲುಪದೆ ಇರುವ ಸ್ಥಳಗಳಿಗೆ ನಾವು ತಲುಪುವಂತೆ ಕರ್ತನ ಸಹಾಯ ಮಾಡಿದ್ದಕ್ಕಾಗಿ ಆತನಿಗೆ ಸ್ತೋತ್ರ. |
| ಜುಲೈ 20 | : | ನಮ್ಮ ಸಹಾಯಕರುಗಳ ಸಹಾಯ ಮತ್ತು ಪ್ರಾರ್ಥನೆಗಾಗಿ ಕರ್ತನಿಗೆ ಸ್ತೋತ್ರ ಸಲ್ಲಿಸೋಣ. |
| ಜುಲೈ 21 | : | ನಮ್ಮ ಸಂತ ಪೌಲ್ ಪ್ರೌಢಶಾಲೆಗಾಗಿ, ನೆಹಮೀಯ ಸತ್ಯವೇದ ಕಾಲೇಜ್, ಸತ್ಯವೇದ ಅಂಚೆ ತರಗತಿಗಳಿಗಾಗಿ ದೇವರಿಗೆ ಸ್ತೋತ್ರ ಸಲ್ಲಿಸೋಣ. |
| ಜುಲೈ 22 | : | ನಮ್ಮ ಪಾ. ಸ್ಯಾಮ್ ಸೆಲ್ವರಾಜ ಅವರ ಕುಟುಂಬವನ್ನು ಅಧಿಕವಾಗಿ ಆಶೀರ್ವದಿಸದ್ದಕ್ಕಾಗಿ ದೇವರಿಗೆ ಸ್ತೋತ್ರ ಸಲ್ಲಿಸೋಣ. |
| ಜುಲೈ 23 | : | ನಮ್ಮ ಎಲ್ಲಾ ಸಹ ಸಂಪಾದಕರಿಗಾಗಿ ಮತ್ತು ಅವರ ಕುಟುಂಬ ಗಳಿಗಾಗಿ ದೇವರಿಗೆ ಸ್ತೋತ್ರ ಸಲ್ಲಿಸೋಣ. |
| ಜುಲೈ 24 | : | ನಮ್ಮ ಮುಖ್ಯ ಸಭೆಯಲ್ಲಿ ಹೆಚ್ಚು ವಿಶ್ವಾಸಿಗಳನ್ನು ಕೊಟ್ಟದಕ್ಕಾಗಿ ದೇವರಿಗೆ ಸ್ತೋತ್ರ ಸಲ್ಲಿಸೋಣ. |
| ಜುಲೈ 25 | : | ನಂಬಿಕೆಯ ಸಹಭಾಗಿಗಳಿಗಾಗಿ, ಜೀವಂತ ಸಹಭಾಗಿಗಳಿಗಾಗಿ ಮತ್ತು ದೊಡ್ಡ ಆಜ್ಞೆಯ ಸಹಭಾಗಿಗಳಿಗಾಗಿ ಮತ್ತು ಅವರ ಕುಂಟುಬಗಳಿಗಾಗಿ ದೇವರಿಗೆ ಸ್ತೋತ್ರ. |
| ಜುಲೈ 26 | : | ನಮ್ಮ ಕೆಲಸಗಾರರ ಕುಟುಂಬಗಳ ಮೇಲೆ ಆತನ ಆಶೀರ್ವಾದಗಳಿಗಾಗಿ ಕರ್ತನನ್ನು ಸ್ತುತಿಸಿರಿ. |
| ಜುಲೈ 27 | : | ನಮ್ಮ ದೇಶವನ್ನು ಆತನು ಸಂರಕ್ಷಣೆ ಮಾಡಿದ್ದಕ್ಕಾಗಿ ಆತನಿಗೆ ಸ್ತೋತ್ರ ಸಲ್ಲಿಸೋಣ. |
| ಜುಲೈ 28 | : | 3 ಜೂನ್ 2022 ರಂದು ನಡೆದ ನಮ್ಮ ನೆಹಮೀಯ ಸತ್ಯವೇದ ಕಾಲೇಜು ಪದವಿ ಸಮಾರಂಭವನ್ನು ಆಶೀರ್ವದಿಸಿದ್ದಕ್ಕಾಗಿ ದೇವರನ್ನು ಸ್ತುತಿಸಿರಿ. |
| ಜುಲೈ 29 | : | ದೇವರು ನಮ್ಮ ಸಭೆಗಳಲ್ಲಿ ಹೊಸ ವಿಶ್ವಾಸಿಗಳನ್ನು ಕೊಟ್ಟದ್ದಕ್ಕಾಗಿ ಕರ್ತನಿಗೆ ಸ್ತೋತ್ರ ಸಲ್ಲಿಸೋಣ. |
| ಜುಲೈ 30 | : | ನಮ್ಮ ವಸತಿ ಮತ್ತು ಸಂಜೆ ನೆಹೆಮೀಯ ಸತ್ಯವೇದ ಕಾಲೇಜು ಕೋರ್ಸ್‌ಗಳಿಗೆ ಹೊಸ ವಿದ್ಯಾರ್ಥಿಗಳನ್ನು ಪಡೆಯಲು ದೇವರು ದಯೆಯಿಂದ ನಮಗೆ ಸಹಾಯ ಮಾಡಿದನು. |
| ಜುಲೈ 31 | : | ನಮ್ಮ ವಸತಿ ಸತ್ಯವೇದ ಕಾಲೇಜ್‌ಗೆ ತುರ್ತಾಗಿ ಬೇಕಾದ ವಾಟರ್ ಕೂಲರ್, ಫ್ರಿಡ್ಜ್, ಮಂಚಗಳು, ಚಾಪೆಗಳು, ಅಡುಗೆ ಸಾಮುನು ಗಳನ್ನು ತೆಗೆದುಕೊಳ್ಳುವದಕ್ಕೆ ಕರ್ತನು ಸಹಾಯ ಮಾಡಿದಕ್ಕಾಗಿ ಆತನಿಗೆ ಸ್ತೋತ್ರ ಸಲ್ಲಿಸೋಣ. |
| ಆಗಸ್ಟ್ 01 | : | ರಾಜ್ಯ ಸಂಯೋಜಕರ ಸಂಗತಿಗಳಿಗಾಗಿ ದೇವರಿಗೆ ಸ್ತೋತ್ರ ಸಲ್ಲಿಸೋಣ. |
| ಆಗಸ್ಟ್ 02 | : | ಸೇವಾಕ್ಷೇತ್ರಗಳ ಕೆಲಸಗಾರರ ದೊಡ್ಡ ಸಮರ್ಪಣೆಗಾಗಿ ದೇವರಿಗೆ ಸ್ತೋತ್ರ ಸಲ್ಲಿಸೋಣ. |
| ಆಗಸ್ಟ್ 03 | : | ನಮ್ಮ ಕರ್ತನು ನಮ್ಮ ಹಿರಿಯ ಸೇವಕರನ್ನು ಮತ್ತು ಅವರ ಕುಟುಂಬದ ಸದಸ್ಯರನ್ನು ಎಲ್ಲಾ ದುಷ್ಟ ಶಕ್ತಿಗಳಿಂದ ರಕ್ಷಿಸಿದ್ದಾನೆ. |

## ಪ್ರಾರ್ಥನೆಗಾಗಿ ಅಂಶಗಳು

| | | |
|---|---|---|
| ಆಗಸ್ಟ್ 04 | : | ನಮ್ಮ ಅಂಗ್ಲ ಭಾಷೆಯ ಸಹ ಸಂಪಾದಕರು ಆದ ಸಹೋ. ಮ್ಯಾನುವೇಲ್, ಎಂ. ಪಾಲ್‌ರಾಜ್‌ರವರು ಮೇ 25, 2022 ರಂದು ಮಹಿಮೆಯಲ್ಲಿ ಸೇರಿದರು. ದಯ ಮಾಡಿ ದುಂಖದಲ್ಲಿರುವ ಸ್ನೇಹಿತರಿಗಾಗಿ, ಕುಟುಂಬದವರಿಗಾಗಿ ಹಾಗು ಸಂಬಂಧಿಕರಿಗಾಗಿ ಪ್ರಾರ್ಥಿಸಿರಿ. |
| ಆಗಸ್ಟ್ 05 | : | ಸುವಾರ್ತೆ ತಲುಪದೇ ಇರುವ ಸ್ಥಳಗಳಿಗೆ ಸುವಾರ್ತೆ ಯನ್ನು ತಲುಪಿಸುವ ಶಕ್ತಿಯನ್ನು ದೇವರು ಕೊಡುವಂತೆ ಪ್ರಾರ್ಥಿಸಿರಿ. |
| ಆಗಸ್ಟ್ 06 | : | ಎಲ್ಲಾ ಧರ್ಮಗಳಲ್ಲಿ ಒಗ್ಗಟ್ಟು ಬರುವದಕ್ಕಾಗಿ ಪ್ರಾರ್ಥಿಸಿರಿ. |
| ಆಗಸ್ಟ್ 07 | : | ಎಲ್ಲಾ ದೇಶಗಳು ದೇವರ ಮುಂದೆ ಪ್ರಾಮಾಣಿಕರಾಗುವಂತೆ ಪ್ರಾರ್ಥಿಸಿರಿ. |
| ಆಗಸ್ಟ್ 08 | : | ಆತನ ರಾಜ್ಯವನ್ನು ಈ ಲೋಕದಲ್ಲಿ ಕಟ್ಟುವಂತೆ ಅನೇಕ ದರ್ಶನಗಳನ್ನು ಕೊಡುವಂತೆ ಪ್ರಾರ್ಥಿಸಿರಿ. |
| ಆಗಸ್ಟ್ 09 | : | ನಮ್ಮ ದೇಶದ ಏಕತೆ ಮತ್ತು ಎಲ್ಲಾ ಅಂಶಗಳಲ್ಲಿ ಮತ್ತು ಯೋಜನೆಯಲ್ಲಿ ಪ್ರಗತಿಗಾಗಿ ಪ್ರಾರ್ಥಿಸಿರಿ. |
| ಆಗಸ್ಟ್ 10 | : | ಈ ಹೊತ್ತು ನಾವು ಸೇವೆಯಲ್ಲಿ 54ನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ದಯಮಾಡಿ ಪ್ರಾರ್ಥಿಸಿರಿ. |
| ಆಗಸ್ಟ್ 11 | : | ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧಕ್ಕಾಗಿ ದಯಮಾಡಿ ಪ್ರಾರ್ಥಿಸಿರಿ ಮತ್ತು ಪ್ರಪಂಚದಾದ್ಯಂತ ಶಾಂತಿಯ ಅಗತ್ಯವಿದೆ. |
| ಆಗಸ್ಟ್ 12 | : | ಪ್ರಪಂಚದ ಎಲ್ಲಡೆಯಲ್ಲಿ ಶಾಂತಿ ನೆಲೆಸುವಂತೆ ಪ್ರಾರ್ಥಿಸಿರಿ. |
| ಆಗಸ್ಟ್ 13 | : | ನಮ್ಮ ಹಿರಿಯ ಸಭಾಪಾಲಕರ ಆತ್ಮಚರಿತ್ರೆಯನ್ನು ಸಫಲವಾಗಿ ಬರೆಯುವಂತೆ ಪ್ರಾರ್ಥಿಸಿರಿ. |
| ಆಗಸ್ಟ್ 14 | : | ಮಹಿಳೆಯರ ಮತ್ತು ಮಕ್ಕಳ ಮೇಲಿನ ದೌರ್ಜನ್ಯವು ಸಂಪೂರ್ಣ ನಾಶವಾಗುವಂತೆ ಪ್ರಾರ್ಥಿಸಿರಿ. |
| ಆಗಸ್ಟ್ 15 | : | ನಮ್ಮ ಸಂಯೋಜಕರಿಗೆ ಮತ್ತು ಸಭಾಪಾಲಕರಿಗೆ ದೇವರು ಹೊಸ ಶಕ್ತಿಯನ್ನು ಕೊಡುವಂತೆ ಪ್ರಾರ್ಥಿಸಿರಿ. |
| ಆಗಸ್ಟ್ 16 | : | ಕ್ರಿಸ್ತೀಯ ಎಲ್ಲಾ ಸಂಘ ಸಂಸ್ಥೆಗಳಿಗಾಗಿ ಪ್ರಾರ್ಥಿಸಿರಿ. |
| ಆಗಸ್ಟ್ 17 | : | ನಮ್ಮ ಸೇವಾಕ್ಷೇತ್ರದಲ್ಲಿರುವ ಕೆಲಸಗಾರರಿಗಾಗಿ ಪ್ರಾರ್ಥಿಸಿರಿ. |
| ಆಗಸ್ಟ್ 18 | : | ನಮ್ಮ ಹಿರಿಯ ಸಭಾಪಾಲಕರಾದ ಸ್ಯಾಮ್ ಸೆಲ್ವರಾಜ್ ರವರ ಯೋಜನೆಗಳ ಮೇಲೆ ದೇವರ ಆಶೀರ್ವಾದಕ್ಕಾಗಿ ಪ್ರಾರ್ಥಿಸಿರಿ. |

(4 ನೇ ಪುಟದಿಂದ)

ಪ್ರಿಯ ಓದುಗರೇ, ಎಲೀಯನಿಂದ ಬಿದ್ದ ನಿಲುವಂಗಿಯನ್ನು ತೆಗೆದುಕೊಂಡು ನದಿಯು ವಿಭಜನೆಯಾದ ನೀರನ್ನು ಹೊಡೆದನು, ಎಲೀಷನು ನದಿಯನ್ನು ದಾಟಿದನು. ನಿಮ್ಮ ಸ್ವಂತ ವಿಧ್ಯಾರ್ಹತೆಯ ಬಗ್ಗೆ ಹಾಗು ನಿಮ್ಮ ಕಡಿಮೆ ಸ್ಥಿತಿಯ ಬಗ್ಗೆ ಆಲೋಚನೆ ಮಾಡಬೇಡಿರಿ. ಎಲೀಷನು ಹೆಚ್ಚು ಅದ್ಭುತ ಕಾರ್ಯಗಳನ್ನು ಮಾಡಿದನೆಂದು ಸತ್ಯವೇದವು ಹೇಳುತ್ತದೆ.

### 3. ದೇವರು ಪ್ರತಿಯೊಂದು ಸಣ್ಣಪ್ರಾರ್ಥನೆಗಳಿಗೆ ಉತ್ತರಿಸುತ್ತಾನೆ.

ಯಾವಾಗ ನಾವು ನಮ್ಮ ಅಗತ್ಯತೆಗಳಿಗಾಗಿ ದೇವರ ಹತ್ತಿರ ಪ್ರಾರ್ಥಿಸುತ್ತೇವೋ, ದೇವರು ನಮಗೆ ಸರಿಕಾಣುವ ಹಾಗೆ ಉತ್ತರಿಸುವ ಅಗತ್ಯವಿಲ್ಲ. ಉದಾಹರಣೆಗೆ, ನೀವು ಉಪವಾಸವಿದ್ದು ಬ್ಯಾಂಕ್ ಲೋನ್‌ಗಾಗಿ ಪ್ರಾರ್ಥಿಸುತ್ತಾ ಇದ್ದರೆ, ಆ ಲೋನ್‌ಗಾಗಿ ದೇವರು ನಿಮಗೆ ಸಹಾಯ ಮಾಡದೆ ಇರಬಹುದು. ಆದರೆ ದೇವರು ಅದ್ಭುತ ರೀತಿಯಲ್ಲಿ ನಿಮ್ಮ ಹಣಕಾಸಿನ ಅಗತ್ಯತೆಗಳನ್ನು ಬೇರೆ ಯಾವುದೇ ರೀತಿಯಲ್ಲಿ ನಿಮಗೆ ಪೂರೈಸಬಹುದು.

ಡಾ. ರವಿಂದ್ರ ಬೋಜ್ ಎಂಬ ಒಬ್ಬ ಸ್ನೇಹಿತನು ನನಗೆ ಇದ್ದಾನೆ. ಈತನು ಚೆನ್ನೈಯಲ್ಲಿ ಶಸ್ತ್ರಚಿಕಿತ್ಸಕನು ಆಗಿದ್ದಾನೆ. ಈತನು ದೇವ ಮನುಷ್ಯನು ಈತನಿಗೆ ಯಾವುದೇ ಹಣದ ಆಸೆ ಇಲ್ಲ. ಈತನು ದೇವರ ಸೇವಕನು ಕೂಡ. ಒಮ್ಮೆ ವೈದ್ಯರು ನನ್ನ ಸ್ನೇಹಿತರಲ್ಲಿ ಒಬ್ಬರಿಗೆ ಮೂಲವ್ಯಾದಿ ಇದೆ ಮತ್ತು ಅದನ್ನು ಅಪರೇಷನ್ ಮಾಡಬೇಕೆಂದು ನಿರ್ಣಯಿಸಿದರು. ಆ ಸ್ನೇಹಿತನು ನನ್ನ ಹತ್ತಿರ ಪ್ರಾರ್ಥನೆಗಾಗಿ ಬಂದನು. ಆತನಿಗಾಗಿ ಪ್ರಾರ್ಥಿಸಿದೆನು. ಈತನು ಬಹಳ ಬಡವನಾಗಿದ್ದನು. ನನ್ನ ಸ್ನೇಹಿತನಾದ ಡಾ. ರವಿಂದ್ರ ಬೋಜ್‌ನ ಬಳಿಗೆ ಕರೆದುಕೊಂಡು ಹೋದೆನು.

ರೋಗಿಯನ್ನು ಪರಿಕ್ಷೆ ಮಾಡುವದಕ್ಕೆ ಮುಂಚಿತವಾಗಿ ವೈದ್ಯನು ಸಣ್ಣ ಪ್ರಾರ್ಥನೆ ಮಾಡಿದನು. ನಂತರ ರೋಗಿಗೆ ಅಪರೇಷನ್ ಮಾಡುವ ಅಗತ್ಯವಿಲ್ಲ. ಸಾಕಷ್ಟು ನೀರನ್ನು ಕುಡಿಯಿರಿ. ಹೆಚ್ಚು ಹಸಿರು ತರಕಾರಿಯನ್ನು ಮತ್ತು ಬಾಳೆಹಣ್ಣನ್ನು ತಿನ್ನಿರಿ. ಒಂದು ವಾರದ ನಂತರ ಬನ್ನಿರಿ. ನಿಶ್ಚಯವಾಗಿ ನೀವು ಗುಣಮುಖ ರಾಗುತ್ತೀರಿ. ಹಿಂತಿರುಗಿ ಬರುವಾಗ ರೋಗಿಯ ಮುಖದಲ್ಲಿ ನಿರಾಶೆಯಿತ್ತು. ನೀನು ಚಿಂತೆ ಮಾಡುತ್ತಿ ಎಂದು ನಾನು ಕೇಳಿದಾಗ? ನನಗೆ ಅಪರೇಷನ್ ಆಗಿಲಿಲ್ಲ ಎಂದು ಆತನು ಉತ್ತರಿಸಿದನು. ಕಡಿಮೆ ಖರ್ಚಿನಲ್ಲಿ ಅಪರೇಷನ್ ಆಗಬೇಕೆಂದು ಆತನ ಅಪೇಕ್ಷೆ ಯಾಗಿತ್ತು! ಏನೇ ಹಾಗಲಿ ಆತನು ವೈದ್ಯರ ಸಲಹೆಯನ್ನು ಪಡೆದು ಕೊಂಡನು.

ಆದರೆ ಏನಾಯಿತು, ಆತನು ಸಂಪೂರ್ಣವಾಗಿ ಅಪರೇಷನ್ ಇಲ್ಲದೆ ಗುಣಮುಖನಾದನು! ಅತನ ಸಮಸ್ಯೆ ಏನೆಂದರೆ, ಅತನು ಶಸ್ತ್ರಚಿಕಿತ್ಸೆಗೆ ಸಿದ್ಧರಾಗಿದ್ದರು ಮತ್ತು ಈಗ ಅಪರೇಷನ್ ನಡೆಯಲಿಲ್ಲ! ಕೆಲವೊಮ್ಮೆ ನಾವು ಪ್ರಾರ್ಥಿಸುತ್ತೇವೆ ಮತ್ತು ನಮ್ಮ ಮನಸ್ಸು ಹೇಳಿದಂತೆ ಉತ್ತರವನ್ನು ನಿರೀಕ್ಷಿಸುತ್ತೇವೆ. ಆದರೆ ದೇವರು ತನ್ನ ಜ್ಞಾನದಿಂದ ಮತ್ತು ಶಕ್ತಿಯಿಂದ ಕಾರ್ಯಮಾಡುತ್ತಾನೆ. ಆದರೆ ನಾವು ಆ ಆದ್ಭುತ ಕಾರ್ಯವನ್ನು ಸ್ವೀಕಾರ ಮಾಡುವದಕ್ಕೆ ನಾವು ಸಿದ್ಧರಾಗಿರಬೇಕು!

ಎಲೀಯನ ಶಕ್ತಿಯ ಎರಡು ಭಾಗದ ಬದಲಿಗೆ, ಅವನ ಶಾಲುಮಾತ್ರ ಸಿಕ್ಕಿತು ಎಂದು ಎಲೀಷನು ಯೋಚಿಸಬಹುದಿತ್ತು. ಆದರೆ ಎಲೀಷನು, ಆದ್ಯಾತ್ಮಿಕ ಮನುಷ್ಯನಾಗಿ ಆ ಶಾಲನ್ನು ಸಂಪೂರ್ಣ ಮನಸ್ಸಿನಿಂದ ಸ್ವಿಕರಿಸುವದಕ್ಕೆ ಸಿದ್ಧನಾದನು!

ಪ್ರೀತಿಯ ದೇವಮಗುವೇ, ನಿಮ್ಮ ಪ್ರಾರ್ಥನೆಗಳಿಗೆ ದೇವರ ಉತ್ತರಗಳ ಕಡೆಗೆ ನಿಮ್ಮ ವರ್ತನೆ ಹೇಗಿದೆ?

## III. ಗೆಹಜಿ

ಸಿರಿಯಾ ಸೈನ್ಯದ ಒಬ್ಬ ಮಹಾನ್ ಕಮಾಂಡರ್ ಅವನ ದೇಹದಲ್ಲಿ ಕುಷ್ಠರೋಗವನ್ನು ಹೊಂದಿದ್ದನು. ಅವನ ಹೆಸರು ನಾಮನನು (2 ಅರಸುಗಳು 5:1) ಇಸ್ರಾಯೇಲ್ಯನಿಂದ ಬಂದ ಒಬ್ಬ ಯೌವ್ವಸ್ಥ ಹುಡುಗಿ ಅವನ ಮನೆಯಲ್ಲಿ ಕೆಲಸಮಾಡುತ್ತಿದ್ದಳು ಆಕೆಯು ತನ್ನ ಯಜಮಾನಿಗೆ ನಾಮನನ್ನು ಎಲೀಷನ ಬಳಿಗೆ ಕರೆದುಕೊಂಡು ಹೋದರೆ ಆತನು ಗುಣ ಆಗಬಹುದು ಎಂದು ಸಲಹೆಯನ್ನು ಕೊಟ್ಟಳು. ನಾಮನನು ಎಲೀಷನ ಬಳಿಗೆ ಬಂದನು. ಯಾವಾಗ ಅವನು ಎಲೀಷನ ಮನೆಯ ಬಾಗಿಲಿ ಬಳಿ ನಿಂತನು. ಎಲೀಷನು ಅವನಿಗೆ ನೀನು ಯೋರ್ದಾನೆ ಹೊಳೆಯಲ್ಲಿ 7 ಸಾರಿ ಮುಳುಗು ಎಂದು ಹೇಳಿದನು. ನಾಮನನು ಇದನ್ನು ಕೇಳಿ ಕೋಪಗೊಂಡು, ಅವನು ಖಂಡಿತವಾಗಿಯೂ ನನ್ನ ಬಳಿಗೆ ಬಂದು ನಿಂತುಕೊಂಡು ತನ್ನ ದೇವರಾದ ಕರ್ತನ ಹೆಸರನ್ನು ಕರೆಯುವನು ಎಂದು ನಾನು ಭಾವಿಸಿದೆನು. ನನ್ನ ಗಾಯದ ಮೇಲೆ ಕೈಯಾಡಿಸಿ ನನ್ನ ಕುಷ್ಠರೋಗವನ್ನು ವಾಸಿ ಮಾಡುವನು. ಯೋರ್ದಾನ್ ನದಿಗಿಂತ ಉತ್ತಮವಾದ ಅನೇಕ ನದಿಗಳು ನಮ್ಮ ಭೂಮಿಯಲ್ಲಿ ಇಲ್ಲವೇ? ಆದರೆ ಅವನ ಸೇವಕರು ಅವನನ್ನು ಸಮಾಧಾನ ಪಡಿಸಿ ಹೇಳಿದರು. ತಂದೆಯೇ, ಒಂದು ವೇಳೆ ಪ್ರವಾದಿಯು ದೊಡ್ಡ ಸಂಗತಿ ಹೇಳಿದ್ದರೆ ನೀವು ಮಾಡುತ್ತಿದ್ದಲ್ಲವೇ? ಇದು ದೊಡ್ಡ ಸಂಗತಿಯಲ್ಲ, ನಿನಗೆ ಆತನು ಹೋಗಿ ತೊಳೆದುಕೊಂಡು ಶುದ್ಧನಾಗು?

ಇದನ್ನು ಕೇಳಿದಂತಹ ನಾಮನನು, ಹೋಗಿ ಯೋರ್ದಾನ್ ನದಿಯಲ್ಲಿ 7 ಸಾರಿ ಮುಳಿಗಿದನು. ದೇವರ ಮನುಷ್ಯನ ಮಾತಿನ ಪ್ರಕಾರ ಆತನು ದೇಹವು ಚಿಕ್ಕಮಗುವಿನ ಹಾಗೆ ಆಯಿತು. ಆತನು ಶುದ್ಧನಾದನು. ಆತನು ದೇವರ ಸೇವಕನ ಬಳಿಗೆ ಪುನಃ ಹೋದನು. ಆತನು ಮತ್ತು ಆತನು ಸೇವಕರು ಆತನ ಮುಂದೆ ಬಂದು ನಿಂತರು. ಆವನು ಈ ರೀತಿಯಾಗಿ ಹೇಳಿದನು, ಅನಂತರ ಅವನು ತನ್ನ ಪರಿವಾರದವರೊಡನೆ ಹಿಂದುರಿಗಿ ದೇವರ ಮನುಷ್ಯನ ಹತ್ತಿರ ಹೋಗಿ ಅವನ ಮುಂದೆ ನಿಂತು ಇಸ್ರಾಯೇಲ್ ದೇಶದಲ್ಲಿರುವ ದೇವರ ಹೊರತಾಗಿ ಲೋಕದಲ್ಲಿ ಬೇರೆ ದೇವರು ಇರವದೇ ಇಲ್ಲವೆಂದು ಈಗ ನನಗೆ ಗೊತ್ತಾಯಿತು; ನೀನು ದಯವಿಟ್ಟು ಕಾಣಿಕೆಯನ್ನು ಅಂಗೀಕರಿಸ ಬೇಕು ಎಂದು

NEHEMIAH BIBLE EVENING COLLEGE
Chepauk & Santhoshapuram, Chennai.
Medium : Tamil
Registered Candidate for Membership
Asia Theological Association (ATA)
Recognised by International Christian Leaders & Senior Pastors for the past 53 years
Certificate in Theology : One year
Diploma in Theology : Two years
Qualification : 10th Standard & above
Rush for Admission!
Contact : The Chairman, Nehemiah Bible College.
10, MOHAMMED ABDULLAH 2ND STREET, BELLS ROAD, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org

ಹೇಳಿದನು. **"ಅದಕ್ಕೆ ಎಲೀಷನು ನಾನು ಸನ್ನಿದಿ ಸೇವೆ ಮಾಡುತ್ತಿರುವ ಯೆಹೋವನಾಣೆ, ನಿನ್ನಿಂದ ಏನೂ ತೆಗೆದು ಕೊಳ್ಳುವದಿಲ್ಲ ಅಂದನು. ನಾಮಾನನು ಎಷ್ಟು ಒತ್ತಾಯ ಪಡಿಸಿದರೂ ಅವನು ತೆಗೆದು ಕೊಳ್ಳಲೇ ಇಲ್ಲ"** (2 ಅರಸುಗಳು 5:11-16).

ಎಲೀಷನ ಸೇವಕನಾದ ಗೆಹಜಿಯು ಇದನ್ನು ನೋಡಿ ತನ್ನೊಳಗೆ ಹೀಗೆ ಅಂದು ಕೊಂಡನು. ನನ್ನ ಯಜಮಾನನು ನಾಮಾನನಿಂದ ಏನನ್ನು ಸ್ವೀಕರಿಸಲಿಲ್ಲ. ನಾನು ಅವನ ಹಿಂದೆ ಹೋಗಿ ಏನಾನ್ನದರೂ ತೆಗೆದು ಕೊಳ್ಳುತ್ತೇನೆ. ಯಾವಾಗ ಗೆಹಜಿಯು ನಾಮಾನನ ಬಳಿಗೆ ಬರುವುದನ್ನು ಎಲ್ಲವೂ ಕ್ಷೇಮವೇ ಅವನು ನೋಡಿ ಅವನನ್ನು ವಿಚಾರಿಸಿದನು. ಗೆಹಜಿಯು ಎಲ್ಲವು ಸರಿಯಾಗಿದೆ ಎಂದು ಹೇಳಿದನು. ನನ್ನ ಯಜಮಾನನು ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ. ನಿಜವಾಗಿ, ಈಗಷ್ಟೇ ಪ್ರವಾದಿಗಳ ಮಕ್ಕಳಲ್ಲಿ ಇಬ್ಬರು ಯುವಕರು ಎಪ್ರಾಯೀಮ್ ಪರ್ವತದಿಂದ ನನ್ನ ಬಳಿಗೆ ಬಂದಿದ್ದಾರೆ. ದಯವಿಟ್ಟು ಅವರಿಗೆ ಒಂದು ತಲಾಂತು ಬೆಳ್ಳಿ ಮತ್ತು ಎರಡು ಬದಲಾವಣೆಯ ವಸ್ತ್ರಗಳನ್ನು ಕೊಡು. ದಯಮಾಡಿ ಎರಡು ತಲಾಂತು ತೆಗೆದುಕೊ ಎಂದು ನಾಮಾನನು ಹೇಳಿದನು. ಅವನಿಗೆ ಈ ರೀತಿಯಾಗಿ ಒತ್ತಾಯ ಮಾಡಿದನು. ಎರಡು ಚೀಲದಲ್ಲಿ ಎರಡು ತಲಾಂತುಗಳನ್ನು ತುಂಬಿಕೋ ಎಂದು ಹೇಳಿದನು. ಮತ್ತು ಎರಡು ವಸ್ತ್ರಗಳನ್ನು ತೆಗೆದುಕೋ. ತನ್ನ ಎರಡು ಸೇವಕರುಗಳನ್ನು ಅವನಿಗೆ ಕೊಟ್ಟನು. ಅವುಗಳನ್ನು ಮುಂದೆ ತೆಗೆದುಕೊಂಡು ಹೋದರು. ಗೆಹಜಿಯು ಅವರ ಕೈಗಳಿಂದ ಅವುಗಳನ್ನು ತೆಗೆದುಕೊಂಡು, ಅವುಗಳನ್ನು ತನ್ನ ಮನೆಯಲ್ಲಿ ಇಟ್ಟನು. ಅವರನ್ನು ಕಳುಹಿಸಿದನು.

ಈಗ ತನ್ನ ಯಜಮಾನನ ಮುಂದೆ ಬಂದು ನಿಂತನು. ಗೆಹಜೀಯನೆ ನೀನು ಎಲ್ಲಿಗೆ ಹೋಗಿದ್ದೀಯಾ ಎಂದು ಎಲೀಷನು ಅವನಿಗೆ ಕೇಳಿದನು. ನಾನು ಎಲ್ಲಿಗೆ ಹೋಗಲಿಲ್ಲ ಎಂದು ಹೇಳಿದನು. ಎಲೀಷನಿಗೆ ತನ್ನ ಜ್ಞಾನದ ಆತ್ಮದಿಂದ ತನ್ನ ಸೇವಕನು ಏನು ಮಾಡಿದನೆಂದು ಗೊತ್ತಾಯಿತು. ಅವನಿಗೆ ಬಹಳ ನೋವಾಯಿತು. ಅವನು ಗೆಹಜಿಗೆ ಈ ರೀತಿಯಾಗಿ ಹೇಳಿದನು, **"ಆಗ ಎಲೀಷನು ಅವನಿಗೆ ಒಬ್ಬನು ರಥ ದಿಂದಿಳಿದು ಬಂದು ನಿನ್ನನ್ನು ಎದುರುಗೊಂಡದು ನನ್ನ ಜ್ಞಾನದೃಷ್ಟಿಗೆ ಕಾಣಿಸಲಿಲ್ಲವೆಂದು ನೆನಸುತ್ತೀಯೋ? ದ್ರವ್ಯ, ಬಟ್ಟೆಗಳು, ಎಣ್ಣೇಮರದ ತೋಪುಗಳು, ದ್ರಾಕ್ಷೇತೋಟಗಳು, ಕುರಿದನಗಳು, ದಾಸದಾಸೀ ಜನವು ಇವುಗಳನ್ನು ಸಂಪಾದಿಸುವದಕ್ಕೆ ಇದು ಸಮಯವೋ? ನಾಮಾನನ ಕುಷ್ಠವು ನಿನ್ನನ್ನೂ ನಿನ್ನ ಸಂತಾನ ದವರನ್ನೂ ಸದಾಕಾಲ ಹಿಡಿದಿರುವದು ಅಂದನು. ಕೂಡಲೆ ಅವನಿಗೆ ಕುಷ್ಠ ಹತ್ತಿತು. ಅವನು ಹಿಮದಂತೆ ಬಿಳುಪಾಗಿ ಅವನ ಸನ್ನಿಧಿಯಿಂದ ಹೊರಟು ಹೋದನು"** (2 ಅರಸುಗಳು 5:20-27). ಗೆಹಜಿ, ದೇವರ ಸೇವಕನು, ದೇವರ ಸೇವಕರುಗಳ ಪಟ್ಟಿಯಲ್ಲಿ ಅವನ ಹೆಸರನ್ನು ತೆಗೆದು ಹಾಕಲಾಯಿತು. ಆತನ ಸಂತಾನವು ಕೂಡ ಶಪಿಸಲ್ಪಟ್ಟಿತು.

ನಿಮ್ಮ ಮಾದರಿ ಯಾರು? **ಒಂದು ವೇಳೆ ನೀವು ನನ್ನನ್ನು ಕೇಳಿದರೆ, ನಾನು ಕೂಡ ಎಲೀಷನ ಹಾಗೆ ಆಗಬೇಕೆಂದು ಹೇಳುತ್ತೇನೆ. ಎಲೀಷನ ಅಭಿಷೇಕವು ನನ್ನ ತಲೆಯ ಮೇಲೆ ಇಳಿಯಬೇಕೆಂದು ನಾನು ಬಹಳವಾಗಿ ಬಯಸುತ್ತೇನೆ. ಇದರಿಂದ ನಾನು ದ್ವಿಗುಣವಾಗಿ ಆಶೀರ್ವದಿಸಲ್ಪಬಹುದು ಮತ್ತು ಈ ಜಗತ್ತಿನಲ್ಲಿ ವಿಜಯದ ಜೀವನವನ್ನು ನಡೆಸಬಹುದು.**

ದಯಮಾಡಿ ಸ್ವಲ್ಪಹೊತ್ತು ವಿಚಾರಮಾಡಿ! ನೀವು ಎಲೀಷನ ಹಾಗೆ ಇರುವದಕ್ಕೆ ಕರೆಯ ಲ್ಪಟ್ಟಿದ್ದೀರಾ? ಎಲೀಷನ ಹಾಗೆ ನೀವು ಕರೆಯಲ್ಪಟ್ಟಾಗ್ಯೂ, ಇನ್ನೂ ನಿಮ್ಮ ಅನುದಿನದ ದೇಹದ ಮತ್ತು ಆತ್ಮದ ಸಮಸ್ಯೆಗಳಿಂದ ಹಾದುಹೋಗುತ್ತಾ ಇದ್ದೀರಾ? ಗೆಹಜಿಯನ ಹಾಗೆ ನಿಮ್ಮ ಜೀವಿತವನ್ನು ನಡೆಸುತ್ತಾ ಇದ್ದೀರಾ? ಸೇವೆ ಅಥವಾ ಒಳ್ಳೆಯ ಕೆಲಸಕ್ಕಾಗಿ ನೀವು ಹಣವನ್ನು ಶೇಖರಣೆಮಾಡುತ್ತಾ ಇದ್ದೀರಾ?

ಈ ಹೊತ್ತಿನ ದೇವರ ಸೇವಕರುಗಳ ಚೀಲಗಳಲ್ಲಿ, ಅದರಲ್ಲಿ ಸತ್ಯವೇದ, ಸುವಾರ್ತೆ ಕರಪತ್ರಗಳು ಇರದೆ ಇರಬಹುದು. ಬದಲಿಗೆ ಅವರು ತಮ್ಮ ಕೆಲವು ಪ್ರೀತಿಯ ಯೋಜನೆಗಳ ಕೆಲವು ಬಜೆಟ್ ಪೇಪರ್‌ಗಳು ಮತ್ತು ಕೆಲವು ಸಂಬಂಧಿತ ಪೇಪರ್‌ಗಳನ್ನು ಹೊಂದಿರುವುದು ಖಚಿತವಾಗಿದೆ. ಕೆಲವರು ಅಂತಹ ವಿವರಗಳನ್ನು ನೆನಪಿಟ್ಟುಕೊಳ್ಳಲು ಸಾಕಷ್ಟು ಬುದ್ಧಿವಂತ ರಾಗಿದ್ದಾರೆ! ಇಂದಿನ ಅನೇಕ ದೇವರ ಸೇವಕರು ತಾವು ನೋಡಿದ ಯಾವುದೇ ಹಣವನ್ನು ದೋಚುವ ಯೋಜನೆಗಳನ್ನು ಆವಿಷ್ಕರಿಸುವಲ್ಲಿ ಚೆನ್ನಾಗಿ ಪರಿಣತರಾಗಿದ್ದಾರೆ. ಹಣವನ್ನು ಸಂಪಾದನೆ ಮಾಡುವದಕ್ಕೆ ಅವರಿಗೆ ಪರಿಶುದ್ದ ಕಾರಣಗಳು ಇವೆ.

ಯಾವಾಗ ದೇವರ ಸೇವಕರಿಗೆ ಹಣದ ಅವಶ್ಯಕತೆ ಇರುತ್ತದೆ, ಕೆಲವರು ಈ ರೀತಿಯಾಗಿ ಘೋಷಿಸುತ್ತಾರೆ, ನಿಮ್ಮ ಹಣವನ್ನು ನನಗೆ ಕೊಡಿರಿ, ನಿಮಗಾಗಿ ನಾನು ಕಣ್ಣೀರಿನಿಂದ ಪ್ರಾರ್ಥಿಸುತ್ತೇನೆ. ನೀವು

(9ನೇ ಪುಟಕ್ಕೆ)

## Echo of His Call Postal Courses for candidates in India only

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a course book entitled **New Life – For You!** **After the completion of this course, you will get a certificate. There will be no compulsory fees. You will be blessed!**

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

***For more details, write to us.***

**The Chairman, Nehemiah Bible College,**
**Echo of His Call, Post Box 2957**
CHEPAUK, CHENNAI - 600 005.
**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | | |
|---|---|---|
| **Account Name** | : | **ECHO OF HIS CALL EDUCATIONAL TRUST** |
| **Account Number** | : | **1023 2923 805** |
| **Bank Name** | : | **STATE BANK OF INDIA** |
| **Branch** | : | **TRIPLICANE, CHENNAI - 600 005** |
| **IFSC Code** | : | **SBIN 0000249** |
| **SWIFT Code** | : | **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರೇ ಅರ್ಥವಾಗಲಿ" (ಮತ್ತಾಯ 24:15)

## ಪೆನ್ಸಿಲ್ ಬಾಪೆಯ ಒಂದು ಹಳೆಯ ಕಥೆ

"ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ ಹುಡುಗನನ್ನು ಶಿಕ್ಷಿಸು; ಮುಪ್ಪಿನಲ್ಲಿಯೂ ಓರೆಯಾಗನು" (ಜ್ಞಾನೋಕ್ತಿ 22:6).

ನನ್ನ ಹಳ್ಳಿಯ ಸರ್ಕಾರಿ ಶಾಲೆಯಲ್ಲಿ ನನ್ನ 5ನೇ ತರಗತಿಯನ್ನು ಮುಗಿಸಿದ ಮೇಲೆ, ನನ್ನ ಪಾಸಾಗಿ ಪ್ರೌಢ ಶಾಲೆಗೆ ನನ್ನ ಪ್ರವೇಶವಾಯಿತು. ಇಲ್ಲಿ ನಾವು ಮೊದಲ ಸಾರಿ ಇಂಗ್ಲೀಷ್ ಮೊದಲ ಅಕ್ಷರಗಳನ್ನು ಕಲಿತೆನು. ಶಾಲೆಯ ಮೊದಲ ದಿವಸದಲ್ಲಿ, ತರಗತಿಯ ಶಿಕ್ಷಕರು ಒಂದು **ಪೆನ್ಸಿಲ್ ಮತ್ತು ನೋಟ್ ಪುಸ್ತಕ**ವನ್ನು ತೆಗೆದುಕೊಂಡು ನಾಳೆ ಬನ್ನಿರಿ ಎಂದು ಹೇಳಿದರು. ನಾನು ಮನೆಗೆ ಬಂದ ತಕ್ಷಣ, ಇದರ ಅಗತ್ಯವನ್ನು ನನ್ನ ತಾಯಿಗೆ ಹೇಳಿದೆನು. ನನ್ನ ತಂದೆಯು ಹೊರಗಡೆ ಹೋಗಿದ್ದರು. ಆಕೆಗೆ ನೋಟ್ ಪುಸ್ತಕವನ್ನು ಸಂಗ್ರಹಿಸಲು ಸಾಧ್ಯವಾಯಿತು, ಆದರೆ ನನಗೆ ಪೆನ್ಸಿಲ್ ಖರೀದಿಸಲು ಸಾಧ್ಯವಾಗಲಿಲ್ಲ. ನಮ್ಮ ನೆರೆಯ ಸಂಬಂದಕರಿಂದ ಈ ಅಗತ್ಯವನ್ನು ಪೂರೈಸಲಿಕ್ಕೆ ಆಕೆಗೆ ಇಷ್ಟವಿರಲಿಲ್ಲ. ಆಕೆಯು ಅಸಹಾಯಕತೆಯನ್ನು ನನಗೆ ವಿವರಿಸಿದಳು ಮತ್ತು ಕರ್ತನಾದ ಯೇಸುಕ್ರಿಸ್ತನ ಬಳಿಯಲ್ಲಿ ನನಗಾಗಿ ಬೇಕಾದ ಈ ಪೆನ್ಸಿಲ್‌ಗೋಸ್ಕರ ಪ್ರಾರ್ಥನೆ ಮಾಡು ಎಂದು ಹೇಳಿದಳು.

ಆಕೆಯು ಮಾತುಗಳಿಗೆ ವಿಧೇಯನಾಗಿ, ನಾನು ಮೊಣಕಾಲೂರಿ ದೇವರೆ ನನಗೆ ಪೆನ್ಸಿಲ್ ಕೊಡು ಎಂದು ಪ್ರಾರ್ಥನೆ ಮಾಡಿ ರಾತ್ರಿ ಮಲಗಿಕೊಂಡೆನು. ದೇವರು ನನಗೆ ಮರುದಿನ ಯಾವುದೇ ಪೆನ್ಸಿಲ್‌ನ್ನು ಕೊಡಲಿಲ್ಲ. ಅದುದರಿಂದ ನಾನು ಪೆನ್ಸಿಲ್ ಇಲ್ಲದೆ ಶಾಲೆಗೆ ಹೋಗಬೇಕಾಯಿತು. ಯಾವಾಗ ಎಲ್ಲಾ ವಿಧ್ಯಾರ್ಥಿಗಳು ತಮ್ಮ ಉಪಯೋಗಕ್ಕಾಗಿ ಪೆನ್ಸಿಲ್‌ನ್ನು ತಂದಿರುವಾಗ, ಕೇವಲ ನಾನು ಮಾತ್ರ ಶಿಕ್ಷಕರ ಆಜ್ಞೆಯನ್ನು ಪಾಲಿಸದೆ ಅಶಕ್ತನಾದೆನು. ಅದಕ್ಕಾಗಿ ಶಿಕ್ಷಕರು ನನ್ನ ವಿಷಯದಲ್ಲಿ ಅವರು ಸಂತೋಷಲಿಲ್ಲ. ಆಕೆಯು ನನಗೆ ನಾಳೆಯಿಂದ ಪೆನ್ಸಿಲ್ ಇಲ್ಲದೆ ಶಾಲೆಗೆ ಬರಬಾರದೆಂದು ಹೇಳಿದಳು.

ನಾನು ಮನೆಗೆ ಬಂದು ಶಿಕ್ಷಕರ ಅಸಾಮಾಧನವನ್ನು ನನ್ನ ತಾಯಿಗೆ ವಿವರಿಸಿದೆನು. ಅಕೆಯು ನನ್ನನ್ನು ನೋಡಿ ಮುಗುಳ್ನಕ್ಕಳು ಮತ್ತು ಎರಡನೇ ದಿನವೂ ಕರ್ತನಾದ ಯೇಸುಕ್ರಿಸ್ತನಗೆ ಪ್ರಾರ್ಥಿಸುವುದನ್ನು ಮುಂದುವರಿಸಲು ಹೇಳಿದಳು ಮತ್ತು ಪೆನ್ಸಿಲ್ ದಾರಿಯಲ್ಲಿದೆ ಎಂದು ಭರವಸೆ ನೀಡಿದಳು. ನಾನು ಹಾಗೆ ಮಾಡಿದೆ ಮತ್ತು ಏನೂ ಸಂಭವಿಸಿಲ್ಲ ಎಂದು ಕಂಡುಕೊಂಡೆ. ಮತ್ತೆ ನಾನು ಬರಿಕೈಯಲ್ಲಿ ಶಾಲೆಗೆ ಹೋಗ ಬೇಕಾಯಿತು. ಯಾವಾಗ ಶಿಕ್ಷಕರು ಕೇಳಿದರು ನನ್ನ ತಾಯಿ ಹೇಳಿದ ಹಾಗೆ ನಾನು ಕರ್ತನಾದ ಯೇಸುಕ್ರಿಸ್ತನಲ್ಲಿ ಪ್ರಾರ್ಥನೆಮಾಡಿದ್ದೇನೆ ಪೆನ್ಸಿಲ್ ದಾರಿಯಲ್ಲಿ ಇದೆ ಎಂದು ಹೇಳಿದೆನು. ಶಿಕ್ಷಕಿಗೆ ನನ್ನ ಮೇಲೆ ಕೋಪ ಬಂದು ನನ್ನ ತಾಯಿಯ ನಡುವಳಿಕೆ ಮೇಲೆ ಬೇಸರವಾಯಿತು. ಮರುದಿನ ನಾನು ಪೆನ್ಸಿಲ್ ಇಲ್ಲದೆ ಶಾಲೆಗೆ ಹೋಗಬಾರದು ಎಂದು ಆಕೆಯು ನನಗೆ ಹೇಳಿದಳು.

ದೊಡ್ಡ ನಿರಾಶೆಯಿಂದ, ಈ ವಿಷಯವನ್ನು ನನ್ನ ತಾಯಿಯ ಬಳಿಗೆ ತೆಗೆದುಕೊಂಡು ಹೋದೆನು. ನನ್ನ **ಪೆನ್ಸಿಲ್ ಪ್ರಾರ್ಥನೆ**ಯನ್ನು ಆಲಿಸಿದ್ದಕ್ಕಾಗಿ ಕರ್ತನಾದ ಯೇಸುಕ್ರಿಸ್ತನಿಗೆ ಧನ್ಯವಾದಗಳು ಹೇಳಲು ಆಕೆಯು ನನಗೆ ಹೇಳಿದಳು. ನಾನು ಮಧ್ಯರಾತ್ರಿಯವರೆಗೆ ಧನ್ಯವಾದಗಳನ್ನು ಹೇಳುತ್ತಿದ್ದೇನು. ಆದರೆ ನಾನು ಪೆನ್ಸಿಲ್ ಇಲ್ಲದೆ ಹೋದರೆ ಮುರುದಿನ ಶಾಲೆಯಲ್ಲಿ ನಾನು ಎದುರಿಸಬೇಕಾದ ಕಠಿಣ ಸಮಯ ಮತ್ತು ಶಿಕ್ಷೆಯ ಬಗ್ಗೆ ಯೋಚಿಸಲು ನನಗೆ ನಿದ್ರೆ ಮಾಡಲು ಸಾಧ್ಯವಾಗಲಿಲ್ಲ.

ನನ್ನ ಆಶ್ಚರ್ಯಕ್ಕೆ, ಮಧ್ಯರಾತ್ರಿಯಲ್ಲಿ ಯಾರೋ ಬಾಗಿಲು ಬಡಿಯುತ್ತಿರುವುದನ್ನು ನಾವು ಕೇಳಿದೆವು. ಕೆಲವು ಕಳ್ಳರು ಬಾಗಿಲು ಬಡಿಯುತ್ತಿರಬಹುದು ಎಂದು ನನ್ನ ತಾಯಿಯು ಹೇಳಿದಳು, ಮನೆಯಲ್ಲಿ ಹಿರಿಯ ಪುರುಷ ಯಾರು ಇಲ್ಲ ಎಂದು ತಿಳಿದು ನನ್ನನ್ನು ಮೌನವಾಗಿರಲು ಮತ್ತು ಹಾಸಿಗೆಯ ಕೆಳಗೆ ಮಲಗಲು ನನಗೆ ಹೇಳಿದಳು.

ಆಗ ಕಿಟಕಿಯ ಮೂಲಕ ನನ್ನ ತಾಯಿಯ ಹೆಸರನ್ನು ಉಲ್ಲೇಖಿಸುವ ಧ್ವನಿಯನ್ನು ಕೇಳಿದೆ. ಅದು ಬೇರೆಯಾರು ಅಲ್ಲ ನನ್ನ ಚಿಕ್ಕಪ್ಪ ಸೆಲ್ವಮಣಿ. ನಮ್ಮ ಮನೆಯಿಂದ ಸುಮಾರು 70 ಕಿಲೋ ಮೀಟರ್ ದೂರದಲ್ಲಿರುವ ಪಾಳಯಂಕೊಟ್ಟೈ ಎಂಬ ಊರಿನಲ್ಲಿ ಒಬ್ಬ ಪೋಲೀಸ್ ಅಧಿಕಾರಿಯಾಗಿದ್ದ. ನಾವು ಸಂತೋಷದಿಂದ ಬಾಗಿಲನ್ನು ತೆಗೆದೆವು. ಆತನು ನನಗೆ ಬಹಳಷ್ಟು ಉಡುಗೊರೆಗಳನ್ನು ತಂದನು, ಬಿಸ್ಕತ್ತುಗಳು, ಸಿಹಿತಿಂಡಿಗಳು, ಬಟ್ಟೆಗಳು ಮುಂತಾದವುಗಳು. ನಾನು ಒಂದು ನಿರ್ದಿಷ್ಟ ಉಡುಗೊರೆ ಚೀಲವನ್ನು ತೆರೆದಾಗ, ಅದರೊಳಗೆ ಒಂದು ಪೆಟ್ಟಿಗೆಯನ್ನು ನಾನು ಕಂಡುಕೊಂಡೆ, ನಾನು ಬಹಳ ಆಶ್ಚರ್ಯದಿಂದ ತೆಗೆದಾಗ, ಬಹಳ ದುಬಾರಿಯಾದ ಪೆನ್ಸಿಲ್‌ಗಳು ಆ ಪೆಟ್ಟಿಗೆಯ ತುಂಬಾ ಇದ್ದವು. (ನಟರಾಜ್ ಪೆನ್ಸಿಲ್‌ಗಳು ಆ ಒಂದು ದಿನಗಳಲ್ಲಿ ಇವುಗಳು ಬಹಳ ದುಬಾರಿಯಾಗಿದ್ದವು). ಆ ಒಂದು ಪೆಟ್ಟಿಗೆಯಲ್ಲಿ ಸುಮಾರು 26 ಪೆನ್ಸಿಲ್‌ಗಳು ಇದ್ದವು.

ಆ ಒಂದು ರಾತ್ರಿ ನಾನು ಕುಣಿದು ಕುಪ್ಪಳಿಸಿ ದೇವರು ಕರ್ತನಾದ ಯೇಸುಕ್ರಿಸ್ತನು ಕೇವಲ ಪ್ರಾರ್ಥನೆ ಮಾತ್ರ ಕೇಳದೆ ಅತನು ನನ್ನ ಪ್ರಾರ್ಥನೆ ಉತ್ತರಿಸುತ್ತಾನೆ ಎಂದು ಹೇಳಿದೆನು. ಈ ಒಂದು ಸಂತೋಷದಿಂದ ಆ ದಿನ ರಾತ್ರಿಯಲ್ಲೆ ನಾನು ನಿದ್ರೆಮಾಡಲಿಲ್ಲ.

ಮರುದಿನ ಬೆಳಿಗ್ಗೆ, ಇತರ ವಿದ್ಯಾರ್ಥಿಗಳು ತಲಾ ಒಂದು ಪೆನ್ಸಿಲ್ ಅನ್ನು ಮಾತ್ರ ತಂದಾಗ ನಾನು 24 ಸಂಖ್ಯೆಯ ಬೆಲೆಬಾಳುವ ಪೆನ್ಸಿಲ್‌ಗಳ ಪೆಟ್ಟಿಗೆಯೊಂದಿಗೆ ಸಂತೋಷದಿಂದ ಶಾಲೆಗೆ ಹೋದೆ. ಶಿಕ್ಷಕರು ಅಸಭ್ಯ ಮುಖದಿಂದ ನನ್ನ ಬಳಿಗೆ ಬಂದು ಏನಾಯಿತು ಎಂದು ವಿಚಾರಿಸಿದರು. ನಿನ್ನೆ ದಾರಿಯಲ್ಲಿದ್ದ ಪೆನ್ಸಿಲ್ ಇಂದು ನನ್ನ ಕೈಗೆ ಅದ್ಭುತ ರೀತಿಯಲ್ಲಿ ತಲುಪಿದೆ ಎಂದು ನಾನು ಉತ್ತರಿಸಿದೆ. ಆಕೆಯು ತುಂಬಾ ಸಂತೋಷದಿಂದ ನನ್ನ ಬೆನ್ನನ್ನು ತಟ್ಟಿದಳು ಮತ್ತು ಜೀವಂತ ದೇವರು ಇದ್ದಾನೆ ಎಂದು ವಿದ್ಯಾರ್ಥಿಗಳಿಗೆ ಘೋಷಿಸಿದಳು, ಆತನ ಹೆಸರು ಯೇಸು ಕ್ರಿಸ್ತನು.

ಪ್ರೀತಿಯ ಓದುಗರೇ, ಇದು ಏಳು ವರ್ಷ ವಯಸ್ಸಿನವನಾಗಿದ್ದಾಗ ಸಂಭವಿಸಿತು, ಆದರೆ ಅನುಭವವೂ ಇನ್ನೂ ಮನಸ್ಸಿನಲ್ಲಿ ತಾಜವಾಗಿದೆ. ನನಗೆ ಪೆನ್ಸಿಲ್‌ನ್ನು ಒದಗಿಸಿದ ದೇವರು ಇನ್ನೂ ಜೀವಂತವಾಗಿದ್ದಾನೆ. **ಆತನು ನಿನ್ನೆ ಇದ್ದಹಾಗೆ,**

**ಈ ಹೊತ್ತು ನಿರಂತರವು ಹಾಗೆ ಇದ್ದಾನೆ** (ಇಬ್ರಿಯ 13:8). ಹಾಗಾಗಿ ಇಂದಿಗೂ ನನ್ನ ಕೋಣೆಯಲ್ಲಿ ಚಿಕ್ಕ ಚಾಪೆಯನ್ನು ಇಟ್ಟು ಕೊಂಡಿದ್ದೇನೆ. ಅದನ್ನು ನಾನು **ಪೆನ್ಸಿಲ್ ಚಾಪೆಯೆಂದು** ಕರೆಯುತ್ತೇನೆ. **ನಾನು ಪ್ರತಿದಿನ ಮುಂಜಾನೆ ಪೆನ್ಸಿಲ್ ಚಾಪೆಗೆ ಹೋಗುತ್ತೇನೆ ಮತ್ತು ನನ್ನ ಬಿಗಿಯಾದ ವೇಳಾಪಟ್ಟಿಯ ಹೊರತಾಗಿಯೂ ದಿನಕ್ಕೆ ಮೂರು ಬಾರಿ ಪ್ರಾರ್ಥಿಸಲು ಪ್ರಯತ್ನಿಸುತ್ತೇನೆ ಮತ್ತು ಅದೇ ದೇವರಾದ ಯೇಸು ಕ್ರಿಸ್ತನಿಗೆ ನನ್ನ ಅಗತ್ಯತೆಗಳನ್ನು ರವಾನಿಸುತ್ತೇನೆ. ಇಲ್ಲಿಯವರೆಗೆ ನಾನು ಆತನ ಕಡೆಯಿಂದ ಅನೇಕ ಮಿನಿಬಸ್ಸುಗಳು, ದೊಡ್ಡಕಟ್ಟಡಗಳು ಮುಂತಾದವುಗಳನ್ನು ನಾನು ಪಡೆದು ಕೊಂಡಿದ್ದೇನೆ. ಈ ಒಂದು ಪೆನ್ಸಿಲ್ ಕಡೆಯಿಂದ. ಹಾಗಾಗಿ ಪರಿಶುದ್ಧ ಸತ್ಯವೇದವನ್ನು ಹೊರುವ ಕೈಗಳು ಮೊಣಕಾಲೂರಿ ಪ್ರಾರ್ಥನೆ ಮಾಡುವ ಕಾಲುಗಳು ವಿಫಲಗೊಳ್ಳುವದಿಲ್ಲ ಎಂದು ನಾನು ತೀರ್ಮಾನಕ್ಕೆ ಬಂದಿದ್ದೇನೆ.**

ಆದುದರಿಂದ ಕಳೆದ 53 ವರ್ಷಗಳ ನನ್ನ ಸೇವೆಯಲ್ಲಿ, ನಾನು ಯಾವುದೇ ಹಣವನ್ನು ಸಂಗ್ರಹಿಸುವ ಯೋಜನೆಯನ್ನು ನಡೆಸಲಿಲ್ಲ ಅಥವಾ ಯಾರ ಮನೆಬಾಗಿಲಿಗೆ ಹಣವನ್ನು ಸಂಗ್ರಹಿಸುವದಕ್ಕೆ ಹೋಗಲಿಲ್ಲ ಅಥವಾ ನಮ್ಮ ವಿವಿದ ಸೇವೆಗಳ ಸಾಮಗ್ರಿಗಳನ್ನು ಪಡೆದು ಕೊಳ್ಳುವದಕ್ಕೆ ಹೋಗಲಿಲ್ಲ. ನನ್ನ ಪ್ರಾರ್ಥನೆಗೆ ಉತ್ತರಕೊಟ್ಟಂತ ದೇವರ ಕಡೆಯಿಂದ ಹಣವನ್ನು ಪಡೆದುಕೊಂಡಿದ್ದೇನೆ. ಪೆನ್ಸಿಲ್ ಚಾಪೆಯ ನನ್ನ ಎಲ್ಲಾ ಅಗತ್ಯತೆಗಳಿಗಾಗಿ.

**"ನನ್ನನ್ನು ಬಲಪಡಿಸುವಾತನಲ್ಲಿದ್ದು ಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ"** (ಫಿಲಿಪ್ಪಿ 4:13).

★★★

*(7ನೇ ಪುಟದಿಂದ)*

ಅದೃಷ್ಟವಂತವರು. ಕೆಲವರು ಹೇಳುತ್ತಾರೆ, ನಮ್ಮ ಸೇವೆಗೆ ತಲಾ 1000 ನೀಡಬಲ್ಲ 750 ಜನರನ್ನು ದೇವರು ಬಯಸುತ್ತಾನೆ. ಇನ್ನು ಕೆಲವರು ಹೇಳುತ್ತಾರೆ, ದೇವರು ಕಾಣಿಸಿಕೊಂಡನು ಮತ್ತು ಅವರ ನಿವೃತ್ತಿಯ ಸಮಯದಲ್ಲಿ ದೊಡ್ಡ ಮೊತ್ತವನ್ನು ಪಡೆದ ಜನರು ಎಲ್ಲವನ್ನೂ ನಮ್ಮ ಸೇವೆಗೆ ಕೊಡಬೇಕೆಂದು ಹೇಳುತ್ತಾರೆ, ನಾವು 5 ವರ್ಷಗಳ ನಂತರ ಪೂರ್ಣಮೊತ್ತವನ್ನು ಹಿಂತಿರುಗಿಸುತ್ತೇವೆ.

ಯೇಸು ಸ್ವಾಮಿಯು ತನ್ನ ಶಿಷ್ಯರಿಗೆ ಜನರಿಗೆ ಮೋಸಮಾಡಿರಿ ಎಂದು ಕಲಿಸಲಿಲ್ಲ. ಅದರ ಬದಲಾಗಿ ಈ ರೀತಿಯಾಗಿ ಹೇಳಿದನು, **"ನೀನು ಸಮುದ್ರಕ್ಕೆ ಹೋಗಿ ಗಾಳಾ ಹಾಕಿ ಮೊದಲು ಸಿಕ್ಕುವ ಮೀನನ್ನು ಎತ್ತು; ಅದರ ಬಾಯಿ ತೆರೆದು ನೋಡಿದರೆ ಅದರಲ್ಲಿ ಒಂದು ರೂಪಾಯಿ ಸಿಕ್ಕುವುದು; ಅದನ್ನು ತೆಗೆದುಕೊಂಡು ನಮ್ಮಿಬ್ಬರದಂತ ಹೇಳಿ ಅವರಿಗೆ ಕೊಡು ಎಂದು ಹೇಳಿದನು"** (ಮತ್ತಾಯ 17:27). ಕೆಲವು ದೇವರ ಮಕ್ಕಳು ತಪ್ಪಾದ ಮಾರ್ಗದಲ್ಲಿ ಹಣವನ್ನು ಸ್ವೀಕರಿಸುತ್ತಾರೆ. ಅದರ ರುಚಿಯನ್ನು ಅನುಭವಿಸುತ್ತಾರೆ. ಕೆಲವರು ಕರ್ತನ ಕೆಲಸಕ್ಕೆ ಸ್ವಲ್ಪಹಣವನ್ನು ಹಂಚಿಕೊಳ್ಳಲು ಸಿದ್ಧರಾಗಿದ್ದಾರೆ. ಆದರೆ ದೇವರು ಇಂತಹ ಅನ್ಯಾಯದ ಹಣವನ್ನು ಇಷ್ಟಪಡುವುದಿಲ್ಲ. ಪ್ರೀತಿಯ ದೇವರ ಸೇವಕರುಗಳೆ, ನಿಮ್ಮ ಎಲ್ಲಾ ಚಟುವಟಿಕೆಗಳ ಮೇಲೆ ಎಚ್ಚರಿಕೆ ಇರಲಿ!

ಯಾವಾಗ ನಾವು ದೇವರ ಸೇವೆಯನ್ನು ಪ್ರಾಮಾಣಿಕರಾಗಿ ಮಾಡುತ್ತೇವೆ, ನಮ್ಮ ಅಗತ್ಯತೆಗಳನ್ನು ಪೂರೈಸುವದಕ್ಕೆ ಚಿಂತೆ ಮಾಡುವ ಅಗತ್ಯವಿಲ್ಲ. ನಾವು ಹಣವನ್ನು ಹುಡುಕುವ ಮಾರ್ಗಗಳನ್ನು ರೂಪಿಸ ಬೇಕಾಗಿಲ್ಲ. ನಾವು ಕಥೆಯ ಯೋಜನೆಗಳನ್ನು ಪರಿಚಯ ಮತ್ತು ಕಾರ್ಯಗತಗೊಳಿಸುವ ಅಗತ್ಯವಿಲ್ಲ. ನಮ್ಮನ್ನು ಕರೆದ ಕರ್ತನು ನಂಬಿಗಸ್ತನಾಗಿದ್ದಾನೆ. ಆತನು ತನ್ನ ಮಕ್ಕಳನ್ನು ಎಂದಿಗೂ ಆಶಾಭಂಗ ಪಡಿಸುವದಿಲ್ಲ. ಆತನು ತನ್ನ ಎಲ್ಲಾ ಸೇವೆಗಳನ್ನು ಎಂದಿಗೂ ತಿರಸ್ಕರಿಸುವದಿಲ್ಲ. ಆದರೆ ಆತನು ನಮ್ಮ ಎಲ್ಲಾ ಚಟುವಟಿಕೆಗಳ ಉದ್ದೇಶವನ್ನು ನಿಶ್ಚಯಾಗಿ ನೋಡುತ್ತಾನೆ.

**ಪ್ರೀತಿಯ ದೇವರ ಮಕ್ಕಳೆ, ನಿಮ್ಮ ಮಾನಸಿಕ ನಡುವಳಿಕೆಗೆ ಅನುಸಾರವಾಗಿ ನಿಮ್ಮ ಜೀವಿತವನ್ನು ನಡೆಸುತ್ತಾ ಇದ್ದೀರಾ? ಅದು ಚಿಕ್ಕದಾಗಿರಲಿ ಅಥವಾ ದೊಡ್ಡದಾಗಿರಲಿ ನೀವು ಎಲೀಯನಂತೆ ಇರಲು ಸಿದ್ಧರಿದ್ದೀರಿ? ದೇವರ ಇಚ್ಚೆಯಂತೆ ಪವಿತ್ರ ಜೀವನವನ್ನು ನಡೆಸಿ ಪರಲೋಕವನ್ನು ತಲುಪುವುದೇ?**

**ಅಥವಾ**

**ನೀವು ಎಲೀಷನ ಹಾಗೆ ಇದ್ದೀರಾ, ಶ್ರದ್ಧೆಯಿಂದ ಪ್ರಾರ್ಥಿಸುವುದು, ನಿಮ್ಮ ನಂಬಿಕೆಯಲ್ಲಿ ದೃಢವಾಗಿ ನಿಲ್ಲುವುದು. ಆದುದರಿಂದ ನಿಮ್ಮ ಕರೆಯುವಿಕೆಯಲ್ಲಿ ದೃಢವಾಗಿ ನಿಲ್ಲುವುದು ಮತ್ತು ಎರಡರಷ್ಟು ಆಶೀರ್ವಾದವನ್ನು ಪಡೆಯುವುದು? ನೀವು ಎಲೀಷನನ್ನು ಅನುಸರಿಸುತ್ತಿರಾ ಮತ್ತು ನಿಮ್ಮ ವೈರಿಗಳಿಗಿಂತ ಬುದ್ಧಿವಂತರಾಗುವುದು ಮತ್ತು ನಿಮ್ಮ ಶಿಕ್ಷಕರಿಗಿಂತ ಜ್ಞಾನವಂತರಾಗುವುದು ಮತ್ತು ನಿಮ್ಮ ಹಿರಿಯರಿ'ಗಿಂತ ವಿವೇಕವುಳ್ಳವ ರಾಗುವುದು? (ಕೀರ್ತನೆ 119:98-100).**

**ಅಥವಾ**

**ಸೇವೆಯ ಹೆಸರಿನಲ್ಲಿ ಏನನ್ನಾದರೂ ಮಾಡುವ ಗೆಹಜಿಯಂತಾಗಲು ನೀವು ಬಯಸುತ್ತೀರಾ ಮತ್ತು ಹಣ ಸಂಪಾದನೆಗಾಗಿ ಇಲ್ಲಿಂದ ಅಲ್ಲಿಗೆ ಓಡಿಹೋಗಿ ನಿಮ್ಮ ಸೇವೆಯನ್ನು ಕಳೆದುಕೊಳ್ಳಲು ಮತ್ತು ನಿಮಗೆ ಮತ್ತು ವಂಶಸ್ಥರಿಗೆ ಶಾಪವನ್ನುಗಳಿಸಲು ಕಾರಣವಾಗುತ್ತದೆಯೇ?**

**ನಿಮ್ಮ ನಿರ್ಧಾರವು ನಿಮ್ಮ ಆಸೆಯನ್ನು ಆಧರಿಸಿದೆ. ನಿಮ್ಮ ಉತ್ತರವೇನು?**

★★★

**ಆತನ ಕರೆಯ ಪ್ರತಿಧ್ವನಿಯು ಗಮನಾರ್ಹ ವ್ಯಕ್ತಿ ಮತ್ತು ಪ್ರಕಟನೆಗಳಲ್ಲಿ ಆತನ ಹೆಚ್ಚುವರಿ ಸಾಮಾನ್ಯ ಕೊಡುಗೆಗೆ ವಂದನೆಗಳು!**



ನಾವು

**ಸಹೋ. ಮ್ಯಾನುವೇಲ್ ಎಂ. ಪಾಲ್‌ರಾಜ್**

ವಿಷಾದದಿಂದ ಘೋಷಿಸುತ್ತೇವೆ ಆತನ **ಕರೆಯ ಪ್ರತಿಧ್ವನಿಯ ಹಿರಿಯ ಸಹಸಂಪಾದಕರು,** ಕಳೆದ ಸುಮಾರು 43 ವರ್ಷಗಳಿಂದ ನಮ್ಮೊಂದಿಗೆ ಸೇವೆ ಸಲ್ಲಿಸುತ್ತಿದ್ದ 72 ವರ್ಷ ವಯಸ್ಸಿನ ಇಂಗ್ಲಿಷ್ ಮಾಸಿಕ ಪತ್ರಿಕೆಯ **25 ಮೇ, 2022 ರಂದು ಬುಧವಾರ ಬೆಳಿಗ್ಗೆ 6 ಗಂಟೆಗೆ** ಮಹಿಮೆಯಲ್ಲಿ ಪ್ರವೇಶಿಸಿದರು. ಅವರು ತಮ್ಮ ಪತ್ನಿ, ಮಗ, ಮಗಳು ಮತ್ತು ಮೊಮ್ಮಕ್ಕಳನ್ನು ಆಗಲಿದ್ದಾರೆ. ದಯಮಾಡಿ ನಮಗಾಗಿ ಪ್ರಾಥಿಸಿರಿ.

**– ಪಾ. ಸ್ಯಾಮ್ ಸೆಲ್ವರಾಜ್**

RNI NO. 70107/98, Postal Regn. No. TN/CH (C)/195/21-23 WPP NO. TN/PMG(CCR)/WPP-219/21-23

**A good opportunity to get Echo of His Call monthly magazine at free of cost**

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.

## OUR BANK DETAILS:

### *1. Bank : State Bank of India*

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### *2. Bank : ICICI Bank*

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### *3. Bank : State Bank of India*

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**

*****

**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

**Annual Subscription : Rs. 100/-** **Life Subscription : Rs. 2000/-**

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.com

**YOU CAN SEND YOUR DONATION ONLINE ALSO**

**RNI NO. 70107/98**
**Postal Regn. No. TN/CH/(C)/195/21-23**
**WPP NO. TN/PMG(CCR)/WPP- 219/21-23**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 11th JULY 2022**
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

***GOD BLESS YOU!***

Owned and published by **S. Sam Selva Raj** from New No. 8 & 10, Old No. 18 & 19, Mohammed Abdullah 2nd Street, Chepauk, Chennai-600 005 and printed by him at **Echo of His Call Printers**, New No. 8 & 10, Old No. 18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**